ರಾಯಚೂರು, ಕೊಪ್ಪಳ, ಯಾದಗಿರಿ, ಕಲಬುರ್ಗಿ, ಬಳ್ಳಾರಿ, ವಿಜಯನಗರ, ಬೀದರ, ಏಕಕಾಲಕ್ಕೆ ಪ್ರಕಟಣೆ
Raichur, Koppal, Yadagiri, Kalburgi, Ballary, Vijaya Nagar, Bidar

ರಾಯಚೂರಿನಿಂದ ರಾಜ್ಯದವರೆಗೆ

# ಕನ್ನಡ ಮಾತೃಭೂಮಿ
ಕನ್ನಡದಿನ ಪತ್ರಿಕೆ

KANNADA MATHRUBHOOMI
KANNADA DAILY PAPER

ಸಂಪಾದಕರು : ಶ್ಯಾಮ್ ಸುಂದರ್.ಎಲ್
EDITOR : SHYAM SUNDER L

mathrubhoomircr@gmail.com
Call : 9886635117

ಸಂಪುಟ : Volume : 03 | ಸಂಚಿಕೆ Issue : 172 | ದಿನಾಂಕ : 22-04-2026 Date : 22-04-2026 | ಬುಧವಾರ Wednesday | RNI: Karkan/2023/89199 Post Reg No.: RCR/L/RNP/98/2025-2027 | ರಾಯಚೂರು Raichur | ಪುಟ : Pages : 04 | ರೂ Rs. 2

## ಫೋರ್ಜರಿ ಮೂಲಕ ಜಮೀನು ಮಾರಾಟ ಆರೋಪ: ನ್ಯಾಯ ಸಿಗದಿದ್ದರೆ ಕಾನೂನು ಹೋರಾಟ-ವೆಂಕಟೇಶ

**ರಾಯಚೂರು,ಏ.21**-ರಾಯಚೂರು ಹೋಬಳಿಯ ವಡವಟ್ಟಿ ಗ್ರಾಮದಲ್ಲಿರುವ ಸರ್ವೇ ನಂಬರ್ 261/ಅ ಹಾಗೂ 261/ಆ ನಲ್ಲಿರುವ ತಲಾ 7 ಎಕರೆ 26



ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಫೋರ್ಜರಿ ಮೂಲಕ ಹೆಸರನ್ನು ಸೇರಿಸಿ ಮಾರಾಟ ಮಾಡಲಾಗಿದೆ. ಕೂಡಲೇ ನೈಜ ವಾರಸುದಾರನಾದ ನನಗೆ ನ್ಯಾಯ ಒದಗಿಸಬೇಕೆಂದು ಭಾರತ ರತ್ನ ಸರ್ ಎಂ. ವಿಶ್ವೇಶ್ವರಯ್ಯ ಕಾರ್ಮಿಕ ಸಂಘದ ಜಿಲ್ಲಾಧ್ಯಕ್ಷ ವೆಂಕಟೇಶ ಅವರು ಆಗ್ರಹಿಸಿದರು.

ಅವರಿಂದು ಮಾಧ್ಯಮಗೋಷ್ಠಿಯನ್ನುದ್ದೇಶಿಸಿ ಮಾತನಾಡಿ, ಈ ಜಮೀನು ನಮ್ಮ ಪಿತ್ರಾರ್ಜಿತ ಆಸ್ತಿಯಾಗಿದ್ದು, ನಿಜಾಂ ಸರ್ಕಾರದ ಕಾಲದಲ್ಲಿ ನಮ್ಮ ➘4

## ಯೋಜನಾ ಪ್ರಾಧಿಕಾರದ ಅಧಿಕಾರಿ ಶರಣಪ್ಪ ಮಡಿವಾಳರ ಲಂಚಾವತಾರ ವಿಡಿಯೋ ವೈರಲ್

■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಏ.21**-ಲಿಂಗಸುಗೂರು ಪಟ್ಟಣದ ಯೋಜನಾ ಪ್ರಾಧಿಕಾರದ ಕಚೇರಿಯಲ್ಲಿ ಅಧಿಕಾರಿಯೊಬ್ಬರ 'ಲಂಚಾವತಾರ' ಬಯಲಾಗಿದ್ದು, ಲಂಚಕ್ಕಾಗಿ ಬೇಡಿಕೆಯಿಡುತ್ತಿರುವ ವಿಡಿಯೋ ಈಗ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ.

ಲಿಂಗಸುಗೂರು ತಾಲ್ಲೂಕು ಟೌನ್ ಪ್ಲಾನಿಂಗ್ ಅಧಿಕಾರಿ ಶರಣಪ್ಪ ಮಡಿವಾಳರ ಲೇಔಟ್ ಒಂದರ ಮ್ಯಾಪ್ (ನಕ್ಷೆ) ಅನುಮೋದನೆ ಮಾಡಿಕೊಡಲು ನೇರವಾಗಿಯೇ ವ್ಯಕ್ತಿಯೊಬ್ಬರ ಬಳಿ 3,60,000 ರೂಪಾಯಿ ಲಂಚಕ್ಕೆ ಬೇಡಿಕೆಯಿಟ್ಟಿದ್ದಾರೆ.

ಹಣದ ಮಾತುಕತೆ ನಡೆಯುವ ವೇಳೆ ಕಚೇರಿಯ ಸಿಬ್ಬಂದಿ ಒಳಗೆ ಬಂದಾಗ, ಅವರನ್ನು ದಬಾಯಿಸಿ ಹೊರಗೆ ಕಳುಹಿಸಿ ಡೀಲ್ ಮುಂದುವರಿಸುವ ಮೂಲಕ ಅಧಿಕಾರಿಯ ಧನದಾಹ ಜಗಜ್ಜಾಹೀರಾಗಿದೆ.

ಅಧಿಕಾರಿ ಶರಣಪ್ಪ ಅವರು ಈ ಲಂಚದ ಹಣದಲ್ಲಿ ಮಿನಿಸ್ಟರ್ (ಸಚಿವರಿಗೂ) ಪಾಲು ನೀಡಬೇಕು ಎಂದು ಹೇಳಿರುವುದು. ರಿಯಲ್ ಎಸ್ಟೇಟ್ ಮಾಡುವವರು.

ಸರ್ಕಾರಿ ನಿಯಮಗಳನ್ನು ಗಾಳಿಗೆ ತೂರಿದರೂ ಪರವಾಗಿಲ್ಲ, ತಮಗೆ ಮಾತ್ರ ಹಣ ತಲುಪಬೇಕು ಎಂಬಂತೆ ವರ್ತಿಸುತ್ತಿರುವುದು ವಿಡಿಯೋದಲ್ಲಿ ಸ್ಪಷ್ಟವಾಗಿ ಸೆರೆಯಾಗಿದೆ.

ಲೇಔಟ್‌ಗಳಲ್ಲಿ ಸಾರ್ವಜನಿಕ ರಸ್ತೆ, ಚರಂಡಿ, ಉದ್ಯಾನವನ ಮತ್ತು ಬೀದಿ ದೀಪಗಳಿಗೆ ಜಾಗ ಬಿಟ್ಟು ನಿಯಮದಂತೆ ನಕ್ಷೆ ತಯಾರಿಸಬೇಕು. ಆದರೆ, ಇಲ್ಲಿ ಅಧಿಕಾರಿ ತಮಗೆ ಲಂಚ ಕೊಟ್ಟರೆ ಬಿಲ್ಡರ್‌ಗಳಿಗೆ ಅನುಕೂಲವಾಗುವಂತೆ ಮ್ಯಾಪ್ ಮಾಡಿಕೊಡುವುದಾಗಿ ಭರವಸೆ ನೀಡುತ್ತಿದ್ದಾರೆ.

ಲಂಚದ ಹಣ ಕಡಿಮೆ ಮಾಡುವಂತೆ ವ್ಯಕ್ತಿ ಬೇಡಿಕೊಂಡಾಗ, ಅಧಿಕಾರಿ ಶರಣಪ್ಪ ಮಡಿವಾಳರ ಅವರು ಕನಿಷ್ಠ ಇಷ್ಟಾದರೂ ಕೊಡಬೇಕು ಎಂದು ಕ್ಯಾಲ್ಕುಲೇಟರ್‌ನಲ್ಲಿ ಮೊತ್ತವನ್ನು ಟೈಪ್ ಮಾಡಿ ತೋರಿಸುವ ದೃಶ್ಯಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿವೆ.

ಸದ್ಯ ಈ ವಿಡಿಯೋ ಸಾರ್ವಜನಿಕ ವಲಯದಲ್ಲಿ ದೊಡ್ಡ ಚರ್ಚೆಗೆ ಕಾರಣವಾಗಿದ್ದು, ಭ್ರಷ್ಟ ಅಧಿಕಾರಿಯ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂಬ ಆಗ್ರಹ ಕೇಳಿಬಂದಿದೆ.

## ಹೊಸೂರು ಗ್ರಾಮದ ಶ್ರೀ ಸಂಗಮೇಶ್ವರ ದೇವಸ್ಥಾನ ನೂತನ ಶಿಲಾ ಮೂರ್ತಿಗಳ ಭವ್ಯ ಮೆರವಣಿಗೆ



■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಏ.21**- ನಗರದ ಹೊಸೂರು ಬಡಾವಣೆಯ ಐತಿಹಾಸಿಕ ಶ್ರೀ ಸಂಗಮೇಶ್ವರ ದೇವಸ್ಥಾನ ನೂತನ ಶಿಲಾ ಮೂರ್ತಿಗಳ ಭವ್ಯ ಮೆರವಣಿಗೆ ಗ್ರಾಮದಲ್ಲಿ ಅದ್ದೂರಿಯಾಗಿ ನೆರವೇರಿತು.

ಗ್ರಾಮದ ಸರ್ವ ಜಾತಿ,ಧರ್ಮವದರು ಸೇರಿ ಮುನ್ನೂರು ವರ್ಷಗಳ ಇತಿಹಾಸವಿರುವ ಶ್ರೀ ಸಂಗಮೇಶ್ವರ ದೇವಸ್ಥಾನ ಜೀರ್ಣೋದ್ದಾರ ಕೈಗೊಂಡಿದ್ದರಿಂದ ನೂತನ ಶಿಲಾ ಮೂರ್ತಿಗಳನ್ನು ಮೆರವಣಿಗೆ ಮೂಲಕ ಕರೆತಂದು ಪೂಜಿಸಲಾಯಿತು.

ಕಿಲ್ಲೆ ಬೃಹ್ಮನಠದ ಶ್ರೀ ಶಾಂತಮಲ್ಲ ಶಿವಾಚಾರ್ಯರ ದಿವ್ಯ ಸಾನಿಧ್ಯದಲ್ಲಿ ವಿಧಿವ್ಯಕ್ತವಾಗಿ ಪೂಜಾ ➘4

## ಪ್ರಧಾನಿಯಿಂದ ಸಾರ್ವಜನಿಕ ಪ್ರಸಾರ ಸಂಸ್ಥೆಯ ದುರುಪಯೋಗ: ಚುನಾವಣಾ ಆಯೋಗಕ್ಕೆ ಸಿಪಿಐ(ಎಂ) ದೂರು

**ರಾಯಚೂರು,ಏ.21**- ಮಾದರಿ ನೀತಿ ಸಂಹಿತೆ ಜಾರಿಯಲ್ಲಿರುವ ಸಂದರ್ಭದಲ್ಲಿ ಪ್ರಧಾನಿಯವರ ಭಾಷಣದ ಮೂಲಕ ಸಾರ್ವಜನಿಕ ಪ್ರಸಾರ ಸಂಸ್ಥೆ



ದುರುಪಯೋಗವಾಗಿದೆ ಎಂದು ಆರೋಪಿಸಿ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಎಂ.ಎ. ಬೇಬಿ ಅವರು ಭಾರತದ ಚುನಾವಣಾ ಆಯೋಗಕ್ಕೆ ಪತ್ರ ಬರೆದು ದೂರು ಸಲ್ಲಿಸಿದ್ದಾರೆ.

ಏಪ್ರಿಲ್ 18, 2026ರಂದು ಪ್ರಧಾನಿಯವರು ರಾಷ್ಟ್ರವನ್ನು ಉದ್ದೇಶಿಸಿ ನೀಡಿದ ಭಾಷಣವು ದೂರದರ್ಶನದ ಮೂಲಕ ಪ್ರಸಾರವಾಗಿದ್ದು, ಇದನ್ನು ರಾಜಕೀಯ ಪ್ರಚಾರಕ್ಕಾಗಿ ➘4

## ಮಹಿಳಾ ಮೀಸಲಾತಿ ಮಸೂದೆ ವಿರೋಧಿಸಿದ ಕಾಂಗ್ರೆಸ್ ವಿರುದ್ಧ ಜೆಡಿಎಸ್ ಆಕ್ರೋಶ

### ಕಾಂಗ್ರೆಸ್‌ನ ಅಪಮಾನ ನಾರಿಶಕ್ತಿ ಸಹಿಸಬಾರದು-ನಾಡಗೌಡ

■ ಕನ್ನಡ ಮಾತೃ ಭೂಮಿ ವಾರ್ತೆ

**ಸಿಂಧನೂರು,ಏ.21**-ಮಹಿಳಾ ಮೀಸಲಾತಿ ಮಸೂದೆ ವಿರೋಧಿಸಿದ ಕಾಂಗ್ರೆಸ್ ಪಕ್ಷ ತನ್ನ ಅವನತಿಗೆ ತಾನೇ ಅಡಿಪಾಯ ಹಾಕಿಕೊಂಡಿದ್ದು, ಈ ಅಪಮಾನವನ್ನು ನಾರಿ ಶಕ್ತಿ ಸಹಿಸಬಾರದು. ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸ್ ಮುಕ್ತ ಭಾರತ ನಿರ್ಮಾಣಕ್ಕೆ ಪಣತೊಡಬೇಕು ಎಂದು ಮಾಜಿ ಸಚಿವ ವೆಂಕಟರಾವ್ ನಾಡಗೌಡ ಹೇಳಿದರು.

ಅವರು ನಗರದ ತಹಸೀಲ್ದಾರ ಕಾರ್ಯಾಲಯದ ಎದುರುಗಡೆ ಜೆಡಿಎಸ್ ಪಕ್ಷ ಆಯೋಜಿಸಿದ್ದ 'ಮಹಿಳಾ ಮೀಸಲಾತಿ ವಿರೋಧಿಸಿದ ಕಾಂಗ್ರೆಸ್ ಪಕ್ಷದ ವಿರುದ್ಧ'ದ ಪ್ರತಿಭಟನೆಯಲ್ಲಿ ಅವರು ಮಾತನಾಡಿದರು. ಮಹಿಳಾ ವಿರೋಧಿ ಧೋರಣೆ ಹೊಂದಿರುವ ಕಾಂಗ್ರೆಸ್ ಪಕ್ಷ ಇದೀಗ ಎನ್‌ಡಿಎ ಸರ್ಕಾರದಲ್ಲಿ ಪ್ರಧಾನಿ ನರೇಂದ್ರ ಮೋದಿ ಮಸೂದೆಯನ್ನು ಲೋಕಸಭೆಯಲ್ಲಿ ಮಂಡಿಸಿದಾಗ ವಿರೋಧಿಸುವ ಮೂಲಕ ತನ್ನ ಮಹಿಳಾ ➘4



- ಜೆಡಿಎಸ್ ನೇತೃತ್ವದಲ್ಲಿ ಬೃಹತ್ ಪ್ರತಿಭಟನೆ
- ನೂರಾರು ಸಂಖ್ಯೆಯಲ್ಲಿ ಜೆಡಿಎಸ್ ಮಹಿಳಾ ಮುಖಂಡರು ಭಾಗಿ
- ಕಾಂಗ್ರೆಸ್ ಹುಟ್ಟುವ ಕೂಸನ್ನು ಕೊಂದಿದೆ: ಆರೋಪ

## ಜನಗಣತಿ ಕಾರ್ಯಕ್ಕೆ ಗೈರು: ಸಹ ಶಿಕ್ಷಕಿ ಅಮಾನತ್ತು

**ಕಲಬುರಗಿ,ಏ.21**-ಭಾರತ ಜನಗಣತಿ ಕಾರ್ಯ-2027ರ ಕಾರ್ಯಕ್ಕೆ ಗೈರಾಗುವ ಮೂಲಕ ಕರ್ತವ್ಯದಲ್ಲಿ ನಿರ್ಲಕ್ಷ್ಯ ಮತ್ತು ಬೇಜವಾಬ್ದಾರಿತನ ತೋರಿಸಿದ ಆರೋಪದ ಮೇಲೆ ಕಲಬುರಗಿ ದಕ್ಷಿಣ ವಲಯದ ಧರ್ಮಾಪುರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಸಹ ಶಿಕ್ಷಕಿ ಜಮುನಾ ಸರಫ್ ಅವರನ್ನು ಜನಗಣತಿ ಕಾಯ್ದೆ-1948 ಸೆಕ್ಷನ್ 11ರ ಪ್ರಕಾರ ಸೇವೆಯಿಂದ ಅಮಾನತ್ತುಗೊಳಿಸಿ ಕಲಬುರಗಿ ದಕ್ಷಿಣ ವಲಯ ಕ್ಷೇತ್ರ ಶಿಕ್ಷಣಾಧಿಕಾರಿ ವಿಜಯಕುಮಾರ ಜಮಖಂಡಿ ಆದೇಶ ಹೊರಡಿಸಿದ್ದಾರೆ.

ಜಿಲ್ಲಾಧಿಕಾರಿಗಳು ಕಲಬುರಗಿ ಇವರ ಅಧ್ಯಕ್ಷತೆಯಲ್ಲಿ ದಿ.27.02.2026 ರಂದು ನಡೆದ ಸಭೆಯ ನಡಾವಳಿಯಂತೆ ಇದೇ ಏಪ್ರಿಲ್ 5 ರಿಂದ10ರ ವರೆಗೆ ನೌಕರರಿಗೆ ತರಬೇತಿ ನೀಡಿ ಇದೇ ಏಪ್ರಿಲ್ 16 ರಿಂದ ಗಣತಿ ಕಾರ್ಯ ಕೈಗೊಳ್ಳಲು ನಿಯೋಜಿಸಲಾಗಿತ್ತು. ಆದರೆ ಸಹ ಶಿಕ್ಷಕಿ ಜಮುನಾ ಸರಫ್ ಅವರು ಗಣತಿ ಕಾರ್ಯಕ್ಕೆ ಗೈರಾಗಿ ಕರ್ತವ್ಯದಲ್ಲಿ ನಿರ್ಲಕ್ಷ್ಯ ತೋರಿದ್ದರಿಂದ ಕಲಬುರಗಿ ತಹಶೀಲ್ದಾರರು ಹಾಗೂ

## ಪಿಂಜಾರ ನದಾಫ್ ಸಮಾಜಕ್ಕೆ ಪ್ರತ್ಯೇಕ ಅಭಿವೃದ್ಧಿ ನಿಗಮ ಮಂಡಳಿ ಸ್ಥಾಪನೆಗೆ ಮನವಿ



■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಏ.21**- ಪಿಂಜಾರ ನದಾಫ್ ಸಮಾಜಕ್ಕೆ ಪ್ರತ್ಯೇಕ ಅಭಿವೃದ್ಧಿ ನಿಗಮ ಮಂಡಳಿ ಸ್ಥಾಪಿಸುವಂತೆ ಆಗ್ರಹಿಸಿ ಅಖಿಲ ಕರ್ನಾಟಕ ಪಿಂಜಾರ್ ನದಾಫ್ ಮನ್ಸೂರಿ ಹಕ್ಕುಗಳ ಸಂಘದ ವತಿಯಿಂದ ಜಿಲ್ಲಾಧಿಕಾರಿ ಸ್ಥಾನಿಕ ಅಧಿಕಾರಿಗೆ ಮನವಿ ಸಲ್ಲಿಸಲಾಯಿತು.

ರಾಜ್ಯಾದ್ಯಂತ ಸುಮಾರು 35 ರಿಂದ 40 ಲಕ್ಷ ಜನಸಂಖ್ಯೆ ಹೊಂದಿರುವ ಪಿಂಜಾರ ನದಾಫ್ ಸಮುದಾಯವು ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ಹಿಂದುಳಿದಿದ್ದು, ಬಡತನದ ಸಂಕಷ್ಟದಲ್ಲಿ ಜೀವನ ಸಾಗಿಸುತ್ತಿದೆ. ➘4

## ಕ್ಷೇತ್ರ ಪುನರ್‌ವಿಂಗಡಣೆ ಬಿಜೆಪಿಯ ರಾಜಕೀಯ ಹುನ್ನಾರ-ಶ್ರೀದೇವಿ ನಾಯಕ

■ ಕನ್ನಡ ಮಾತೃ ಭೂಮಿ ವಾರ್ತೆ



**ರಾಯಚೂರು,ಏ.21**-ಮಹಿಳಾ ಮೀಸಲಾತಿ ಕಾನೂನು ಮತ್ತು ಕ್ಷೇತ್ರ ಪುನರ್‌ವಿಂಗಡಣೆ ವಿಚಾರಕ್ಕೆ ಸಂಬಂಧಿಸಿದಂತೆ ದೆಹಲಿಯ ಸಂಸತ್ ಭವನದಲ್ಲಿ ಶುಕ್ರವಾರ ನಡೆದ ಮತ ಪ್ರಕ್ರಿಯೆಯಲ್ಲಿ ಎನ್‌ಡಿಎ ಮೈತ್ರಿಕೂಟ ಸೋಲು ಕಂಡಿದ್ದು, ಮಹಿಳಾ ಮೀಸಲಾತಿ ಹೆಸರಿನಲ್ಲಿ ಎನ್‌ಡಿಎ ಸರ್ಕಾರದಿಂದ ರಾಜಕೀಯ ನಡೆಸಲಾಗುತ್ತಿದೆ ಎಂದು ರಾಷ್ಟ್ರೀಯ ಮಹಿಳಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಶ್ರೀದೇವಿ ನಾಯಕ ಆರೋಪಿಸಿದರು.

ಅವರಿಂದು ಮಾಧ್ಯಮಗೋಷ್ಠಿಯನ್ನುದ್ದೇಶಿಸಿ ಮಾತನಾಡಿ, ಮಹಿಳಾ ಮೀಸಲಾತಿ ಕಾನೂನು ಜಾರಿಗೆ ತರುವ ಉದ್ದೇಶ ಇದ್ದರೆ ಕ್ಷೇತ್ರ ಪುನರ್‌ವಿಂಗಡಣೆ ವಿಷಯವನ್ನು

ಅದಕ್ಕೆ ಜೋಡಿಸುವ ಅಗತ್ಯವಿರಲಿಲ್ಲ.ಶೇ.33ರಷ್ಟು ಮೀಸಲಾತಿ ನೀಡುವ ಮಾತು ಕೇವಲ ರಾಜಕೀಯ ಲಾಭಕ್ಕಾಗಿ ಬಳಸಲಾಗುತ್ತಿದೆ ಎಂದು ಹೇಳಿದರು.

2023ರಲ್ಲಿ ಇಂಡಿಯಾ ಮೈತ್ರಿಕೂಟದಲ್ಲಿರುವ ಎಲ್ಲಾ ಪಕ್ಷಗಳು ಮಹಿಳಾ ಮೀಸಲಾತಿಗೆ ಒಪ್ಪಿಗೆ ಸೂಚಿಸಿದ್ದರೂ, ಅದನ್ನು ಜಾರಿಗೆ ತರದೆ ಈಗ ಕ್ಷೇತ್ರ ಪುನರ್‌ವಿಂಗಡಣೆಯನ್ನು ಮುಂದಿಟ್ಟಿರುವುದು ರಾಜಕೀಯ ಷಡ್ಯಂತ್ರವಾಗಿದೆ.

ಕಾಂಗ್ರೆಸ್ ಪಕ್ಷ ಯಾವತ್ತಿಗೂ ಮಹಿಳೆಯರ, ರೈತರ ಹಾಗೂ ಬಡವರ ಪರವಾಗಿರುವ ಪಕ್ಷವಾಗಿದ್ದು, ಮಹಿಳೆಯರ ಪರ ಹಲವಾರು ಯೋಜನೆಗಳನ್ನು ಜಾರಿಗೆ ತಂದಿದೆ.

ಆದರೆ ಬಿಜೆಪಿ ಮೊದಲಿನಿಂದಲೂ ಮಹಿಳಾ ವಿರೋಧಿ ಪಕ್ಷವಾಗಿದೆ ಎಂದರು.

ಕ್ಷೇತ್ರ ಪುನರ್‌ವಿಂಗಡಣೆ ನಡೆದರೆ ಉತ್ತರ ಭಾರತದ ರಾಜ್ಯಗಳಿಗೆ ಜನಸಂಖ್ಯೆ ಆಧಾರದ ಮೇಲೆ ಹೆಚ್ಚಿನ ಸ್ಥಾನಗಳು ದೊರೆಯಲಿದ್ದು, ದಕ್ಷಿಣ ಭಾರತದ ರಾಜ್ಯಗಳಿಗೆ ಅನ್ಯಾಯವಾಗಲಿದೆ.

ಇದರ ಪರಿಣಾಮವಾಗಿ ಒಬಿಸಿ ಹಾಗೂ ಎಸ್‌ಸಿ, ಎಸ್‌ಟಿ ಮಹಿಳೆಯರು ಕೂಡ ಅವಕಾಶದಿಂದ ವಂಚಿತರಾಗುವ ಸಾಧ್ಯತೆ ಇದೆ ಎಂದು ಹೇಳಿದರು. ➘4

## ಏ.24ಕ್ಕೆ ಭಗೀರಥ ಜಯಂತಿ ಆಚರಣೆ: ಸಮಾಜದ ಜನರು ಭಾಗವಹಿಸಲು ಚಂದ್ರಶೇಖರ ಮನವಿ



■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಏ.21**-ಜಿಲ್ಲಾಡಳಿತ ಮತ್ತು ಉಪ್ಪಾರ ಸಮಾಜದಿಂದ ಏ.24ರಂದು ಶ್ರೀ ಮಹರ್ಷಿ ಭಗೀರಥ ಜಯಂತಿಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಉಪ್ಪಾರ ಸಮಾಜ ಸೇವಾ ಸಂಘದ ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ ಹೇಳಿದರು.

ಅವರಿಂದು ಮಾಧ್ಯಮಗೋಷ್ಠಿಯನ್ನುದ್ದೇಶಿಸಿ ಮಾತನಾಡಿ, ಅಂದು ಬೆಳಿಗ್ಗೆ 9 ಗಂಟೆಗೆ ನಗರದ ಉಪ್ಪಾರವಾಡಿ ಶ್ರೀ ಲಕ್ಷ್ಮೀ ವೆಂಕಟೇಶ್ವರ ದೇವಸ್ಥಾನದಲ್ಲಿ ಮಹರ್ಷಿ ಭಗೀರಥ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಸಮಾಜದ ಮಹಿಳೆಯರಿಂದ ಕುಂಭ, ಕಳಸ, ವಿವಿಧ ವಾದ್ಯಮೇಳ ಹಾಗೂ ಕಲಾ ತಂಡಗಳೊಂದಿಗೆ ಭಾವಚಿತ್ರ ಮೆರವಣಿಗೆಯನ್ನು ನಗರದ ಪಂಡಿತ ಸಿದ್ದರಾಮ ಜಂಬಲದಿನ್ನಿ ರಂಗಮಂದಿರದ ವರೆಗೆ ನಡೆಸಲಾಗುತ್ತದೆ. ನಂತರ ರಂಗಮಂದಿರದಲ್ಲಿ ➘4

## ಸರ್ಕಾರಿ ಜಮೀನು ಒತ್ತುವರಿ ದೋಬಿಘಾಟ್ ನಿರ್ಮಾಣ : ಕ್ರಮಕ್ಕೆ ಒತ್ತಾಯ

■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಏ.21**- ನಗರದ ವಾರ್ಡ್ ನಂ. 12ರಲ್ಲಿ ಸರ್ಕಾರಿ ಜಮೀನಿನ ಅನಧಿಕೃತ ಒತ್ತುವರಿ ಮಾಡಿ ದೋಬಿಘಾಟ್ ನಿರ್ಮಾಣ ಮಾಡುತ್ತಿರುವುದನ್ನು ತಡೆಯಬೇಕು, ಆ ಸ್ಥಳದಲ್ಲಿ ಕಲ್ಯಾಣ ಮಂಟಪ ಮತ್ತು ಅಥವಾ ಗ್ರಂಥಾಲಯ ನಿರ್ಮಾಣ ಮಾಡಲು ಒತ್ತಾಯಿಸಿ ಕರ್ನಾಟಕ ಜನಸೈನ್ಯ ವತಿಯಿಂದ ಮಹಾನಗರ ಪಾಲಿಕೆ ಅಧಿಕಾರಿಗೆ ಮನವಿ ಸಲ್ಲಿಸಲಾಯಿತು.

ವಾರ್ಡ್ ನಂ.12ರ ಶ್ರೀ ಉರುಕುಂದ ಈರಣ್ಣ ದೇವಸ್ಥಾನದ ಎದುರುಗಡೆ ದೋಬಿಘಾಟ್ ನಿರ್ಮಾಣಕ್ಕಾಗಿ ಕೇವಲ 110 ಅಡಿ ಜಾಗವನ್ನು ಮೀಸಲಿಡಲಾಗಿದ್ದರೂ, ಈಗ ಅದರ ಪಕ್ಕದಲ್ಲಿರುವ ಹೆಚ್ಚುವರಿ ಜಾಗವನ್ನು ಸಹ ಅನಧಿಕೃತವಾಗಿ ಒತ್ತುವರಿ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ವಾರ್ಡ್‌ನಲ್ಲಿನ ಜನಸಂಖ್ಯೆಯ ಅನುಪಾತವನ್ನು ಪರಿಗಣಿಸದೆ ಒಂದು ಸಮುದಾಯಕ್ಕೆ ಹೆಚ್ಚು ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ, ವಾರ್ಡ್ ನಂ. 12ರ ಶ್ರೀ ಉರುಕುಂದ ಈರಣ್ಣ ನಗರ, ಕುರುಮಗಡ್ಡೆ ಹಾಗೂ ಖಸಾಯಿ ಖಾನೆ ಸುತ್ತಮುತ್ತ ಪ್ರದೇಶಗಳಲ್ಲಿ ದಲಿತರು, ಮಾದಿಗ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುತ್ತಿದ್ದರೂ, ಅವರ ಅಭಿವೃದ್ಧಿಗೆ ಅಗತ್ಯವಾದ ಮೂಲಭೂತ ಸೌಕರ್ಯಗಳ ಕೊರತೆ ಇದೆ.

ಈ ವಾರ್ಡ್ ಅಭಿವೃದ್ಧಿಯಲ್ಲಿ ಹಿಂದುಳಿದಿದ್ದು, ದಲಿತ ಸಮುದಾಯಕ್ಕಾಗಿ ಯಾವುದೇ ಸಮುದಾಯ ಭವನ, ಕಲ್ಯಾಣ ಮಂಟಪ ಅಥವಾ ಗ್ರಂಥಾಲಯ ನಿರ್ಮಾಣವಾಗಿಲ್ಲ. ಇದರಿಂದ ಸಾಮಾಜಿಕ ಹಾಗೂ ಶೈಕ್ಷಣಿಕ ಬೆಳವಣಿಗೆಗೆ ➘4

## ಬಂಗಾಳಿ ವಲಸೆ ಸಮುದಾಯದ ಹಲವು ಸಮಸ್ಯೆಗಳ ಪರಿಹಾರಕ್ಕೆ ಆಗ್ರಹಿಸಿ ಪ್ರತಿಭಟನೆ



■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಏ.21**-ರಾಯಚೂರು ಜಿಲ್ಲೆಯ ಸಿಂಧನೂರು ಭಾಗದಲ್ಲಿ ವಾಸಿಸುತ್ತಿರುವ ವಲಸೆ ಬಂಗಾಳಿ ಸಮುದಾಯದ ಜನರು ಕಳೆದ ಏಳು ದಶಕಗಳಿಂದ ಎದುರಿಸುತ್ತಿರುವ ಮಾನವೀಯ ಹಾಗೂ ಆಡಳಿತಾತ್ಮಕ ಸಮಸ್ಯೆಗಳನ್ನು ಪರಿಹರಿಸುವಂತೆ ಆಗ್ರಹಿಸಿ ಅಜಾದ್ ಬಂಗ್ ಆರ್ಮಿ ಸಂಘಟನೆಯಿಂದ ಜಿಲ್ಲಾಡಳಿತ ಭವನದ ಎದುರು ಪ್ರತಿಭಟನೆ ನಡೆಸಿ ಜಿಲ್ಲಾಧಿಕಾರಿ ಕಚೇರಿಯ ಸ್ಥಾನಿಕ ಅಧಿಕಾರಿಗೆ ಮನವಿ ಸಲ್ಲಿಸಲಾಯಿತು.

ಇದೇ ವೇಳೆ ಸಂಘಟನೆಯ ಪ್ರಮುಖರು ಮಾತನಾಡಿ, 1947ರ ವಿಭಜನೆ ಹಾಗೂ 1964 ಮತ್ತು 1971ರ ಸಂದರ್ಭಗಳಲ್ಲಿ ಪೂರ್ವ ಬಂಗಾಳದಿಂದ ಸ್ಥಳಾಂತರಗೊಂಡ ಹಿಂದೂ ಕುಟುಂಬಗಳನ್ನು ಭಾರತ ಸರ್ಕಾರದ ಪುನರ್ವಸತಿ ಯೋಜನೆಯಡಿ ಸಿಂಧನೂರು ಭಾಗದಲ್ಲಿ ನೆಲೆಗೊಳಿಸಲಾಗಿತ್ತು. ➘4

# ಉತ್ತರ ಕನ್ನಡದ ಪ್ರಸಿದ್ಧ ಯಾಣ ರಾಷ್ಟ್ರೀಯ ಭೂಪಾರಂಪರಿಕ ತಾಣ: ಅಧಿಕೃತ ಘೋಷಣೆ

**ಕಾರವಾರ,ಏ.21-**ಪ್ರಕೃತಿಯ ಅದ್ಭುತ ಸೃಷ್ಟಿ, ಉತ್ತರ ಕನ್ನಡ ಜಿಲ್ಲೆಯ ಪ್ರಸಿದ್ಧ ಪ್ರವಾಸಿ ತಾಣ ಯಾಣದ ಶಿಖರಗಳಿಗೆ ಈಗ ಜಾಗತಿಕ ಮಟ್ಟದ ಮನ್ನಣೆ ದೊರೆತಿದೆ. ಕೇಂದ್ರ ಸರ್ಕಾರದ ಗಣಿ ಸಚಿವಾಲಯದ ಅಧೀನದಲ್ಲಿರುವ ಭಾರತೀಯ ಭೂವೈಜ್ಞಾನಿಕ ಸರ್ವೇಕ್ಷಣಾ ಇಲಾಖೆ (ಎಖಐ), ಯಾಣದ ಶಿಲೆಗಳನ್ನು ಟರಾಷ್ಟ್ರೀಯ ಮಹತ್ವದ ಭೂಪಾರಂಪರಿಕ ತಾಣ ಎಂದು ಅಧಿಕೃತವಾಗಿ ಘೋಷಿಸಿದೆ.

2,700 ಮಿಲಿಯನ್ ವರ್ಷಗಳ ಇತಿಹಾಸ: ಯಾಣದ ಈ ಬೃಹತ್ ಕಪ್ಪು ಶಿಲೆಗಳು ಕೇವಲ ಪ್ರವಾಸಿ ಆಕರ್ಷಣೆಯಲ್ಲ, ಇವು ಭೂಮಿಯ ವಿಕಾಸದ ಕಥೆ ಹೇಳುವ ಜೀವಂತ ಪಳೆಯುಳಿಕೆಗಳು. ಜಿಎಸ್‌ಐ ವರದಿಯ ಪ್ರಕಾರ, ಈ ಶಿಲೆಗಳು ಸುಮಾರು 2,700 ಮಿಲಿಯನ್ ವರ್ಷಗಳ ಹಿಂದೆ ನಿರ್ಮಾಣಗೊಂಡಿವೆ. ಇವು ಮುಖ್ಯವಾಗಿ ಡೊಲೊಮಿಟಿಕ್ ಸುಣ್ಣದ ಕಲ್ಲುಗಳಿಂದ ಕೂಡಿದ್ದು, ಶತಕೋಟಿ ವರ್ಷಗಳ ಹವಾಮಾನ ವೈಪರೀತ್ಯ ಹಾಗೂ ರಾಸಾಯನಿಕ ಪ್ರಕ್ರಿಯೆಗಳಿಂದಾಗಿ ಇಂದಿನ ವಿಶಿಷ್ಟ ರೂಪ ಪಡೆದಿವೆ.

61 ವಿಶಿಷ್ಟ ಭೂರೂಪಗಳ ಸಮೂಹ: ಯಾಣದ ಮೂರು ಕಿಲೋಮೀಟರ್ ವ್ಯಾಪ್ತಿಯಲ್ಲಿ ಒಟ್ಟು 61 ವಿವಿಧ ರೀತಿಯ ಭೂರೂಪಗಳನ್ನು ಗುರುತಿಸಲಾಗಿದೆ. ಇವುಗಳಲ್ಲಿ 120 ಮೀಟರ್ ಎತ್ತರದ ಭೈರವೇಶ್ವರ ಶಿಖರ ಹಾಗೂ 90 ಮೀಟರ್ ಎತ್ತರದ ಮೋಹಿನಿ ಶಿಖರಗಳು ಪ್ರಮುಖವಾದವು. ಕಡಿದಾದ ಗೋಡೆಗಳು, ಗುಹೆಗಳು ಮತ್ತು ಶಿಲಾ ಸಂದುಗಳ ಮೂಲಕ ಇವು ಭೂವಿಜ್ಞಾನಿಗಳಿಗೆ ಸಂಶೋಧನೆಯ ಮುಕ್ತ ಪ್ರಯೋಗಾಲಯದಂತಿವೆ.

ಸರ್ಕಾರಕ್ಕೆ ಜಿಎಸ್‌ಐ ಪತ್ರ: ಜಿಎಸ್‌ಐ ಇಲಾಖೆಯ 176ನೇ ಸಂಸ್ಥಾಪನಾ ದಿನಾಚರಣೆಯ ನೆನಪಿಗಾಗಿ ಮಾರ್ಚ್ 6, 2026ರಂದು ಈ ಘೋಷಣೆಯ ನಿರ್ಣಯವನ್ನು ಅಂಗೀಕರಿಸಲಾಗಿದೆ. ಈ ಕುರಿತು ಜಿಎಸ್‌ಐ ಮಹಾನಿರ್ದೇಶಕ ಅಸಿತ್ ಸಹಾ ಅವರು ಏಪ್ರಿಲ್ 13ರಂದು ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ ಅಧಿಕೃತ ಪತ್ರ ಬರೆದಿದ್ದಾರೆ. ಯಾಣದ ಈ ಅಪರೂಪದ ನೈಸರ್ಗಿಕ ನಿಧಿಯನ್ನು ಸಂರಕ್ಷಿಸಲು ಅಗತ್ಯವಾದ ಅಧಿಸೂಚನೆಯನ್ನು ಹೊರಡಿಸುವಂತೆ ಮತ್ತು ಈ ಪ್ರದೇಶದಲ್ಲಿ ಸುಸ್ಥಿರ ಟಭೂ-ಪ್ರವಾಸೋದ್ಯಮಟ ಅಭಿವೃದ್ಧಿಪಡಿಸುವಂತೆ ಅವರು ಮನವಿ ಮಾಡಿದ್ದಾರೆ.

ಸಂರಕ್ಷಣೆಯ ಅನಿವಾರ್ಯತೆ: ನಿಸರ್ಗದತ್ತವಾಗಿ ಬಂದಿರುವ ಇಂತಹ ಭೂಪಾರಂಪರಿಕ ಸಂಪತ್ತುಗಳು ಒಮ್ಮೆ ನಾಶವಾದರೆ ಮತ್ತೆ ಸೃಷ್ಟಿಸಲು ಸಾಧ್ಯವಿಲ್ಲ. ಆದ್ದರಿಂದ ಇವುಗಳನ್ನು ಮಾನವ ಹಸ್ತಕ್ಷೇಪದಿಂದ ರಕ್ಷಿಸುವುದು ಅಗತ್ಯ ಎಂದು ಜಿಎಸ್‌ಐ ತನ್ನ ನಿರ್ಣಯದಲ್ಲಿ ತಿಳಿಸಿದೆ.

ಸ್ಥಳೀಯ ಆರ್ಥಿಕ ಅಭಿವೃದ್ಧಿ ಹಾಗೂ ಪರಿಸರ ಸಮತೋಲನ ಕಾಯ್ದುಕೊಳ್ಳಲು ಈ ಘೋಷಣೆ ಪೂರಕವಾಗಲಿದೆ. ಈ ಘೋಷಣೆಯಿಂದಾಗಿ ಉತ್ತರ ಕನ್ನಡ ಜಿಲ್ಲೆಯ ಪ್ರವಾಸೋದ್ಯಮ ನಕ್ಷೆಯಲ್ಲಿ ಯಾಣಕ್ಕೆ ಮತ್ತಷ್ಟು ಪ್ರಾಮುಖ್ಯತೆ ಲಭಿಸಲಿದ್ದು, ಅಂತರಾಷ್ಟ್ರೀಯ ಮಟ್ಟದ ಸಂಶೋಧಕರು ಹಾಗೂ ಪ್ರವಾಸಿಗರನ್ನು ಸೆಳೆಯಲು ಇದು ಸಹಕಾರಿಯಾಗಲಿದೆ.

# ಹಾಸನ: ಸಿಡಿಲು ಬಡಿದು ಜಾನುವಾರು ಮೇಯಿಸಲು ಹೋಗಿದ್ದ ಮಹಿಳೆ ಸಾವು

**ಹಾಸನ,ಏ.21-**ಸಿಡಿಲು ಬಡಿದು ಮಹಿಳೆ ಸಾವಿಗೀಡಾದ ಘಟನೆ ಜಿಲ್ಲೆಯ ಆಲೂರು ತಾಲೂಕಿನಲ್ಲಿ ನಡೆದಿದೆ. ನೀಲಮ್ಮ (70) ಸಾವನ್ನಪ್ಪಿದವರು.

ಜಾನುವಾರು ಮೇಯಿಸಲು ಹೋಗಿದ್ದ ನೀಲಮ್ಮ, ಮಳೆಯಿಂದ ರಕ್ಷಣೆ ಪಡೆಯಲು ಮರದ ಬಳಿ ಆಶ್ರಯ ಪಡೆದಿದ್ದರು. ಆಗ ಸಿಡಿಲು ಬಡಿದಿದೆ ಎಂದು ತಿಳಿದು ಬಂದಿದೆ.

ಭೋರ್ಗರೆದು ಸುರಿದ ಭಾರಿ ಮಳೆ ಮತ್ತು ಬಿರುಗಾಳಿಗೆ ಚನ್ನರಾಯಪಟ್ಟಣ ತಾಲೂಕಿನ ನುಗ್ಗೆಹಳ್ಳಿ ಹೋಬಳಿಯ ಕಾರೆಹಳ್ಳಿ, ನಾಗರನವಿಲೆ, ಚಿಕ್ಕೋನಹಳ್ಳಿ, ರೇಚಿಹಳ್ಳಿ ರಸ್ತೆಯುದ್ದಕ್ಕೂ ಸುಮಾರು ಇಪ್ಪತ್ತಕ್ಕೂ ಹೆಚ್ಚು ಮರಗಳು ನೆಲಕ್ಕುರುಳಿವೆ.

ಬೆಳಗ್ಗೆಯಿಂದ ಸಂಜೆತನಕ ಚೆಸ್ಕಾಂ ಸಿಬ್ಬಂದಿ ಮರ ತೆರವು ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದು, ವಿದ್ಯುತ್ ಸಂಪರ್ಕ ಕಡಿತಗೊಂಡಿತ್ತು. ಸಿಡಿಲು ಬಡಿದ ಹಿನ್ನೆಲೆಯಲ್ಲಿ ಚೆಸ್ಕಾಂ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಈ ಸಂಬಂಧ ಆಲೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನೀರಿನಲ್ಲಿ ಮುಳುಗಿ ನಾಲ್ವರು ಸಾವು: ಅರಸೀಕೆರೆ ತಾಲೂಕಿನಲ್ಲಿ ಜಾನುವಾರು ಮೈ ತೊಳೆಯಲು ಹೋಗಿ ಕೆರೆಯಲ್ಲಿ ಮುಳುಗಿ ಅಳಿಯ ಮತ್ತು ಮಾವ ಮೃತಪಟ್ಟರೆ, ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲೂಕಿನಲ್ಲಿ ಈಜಲು ಹೋಗಿ ಇಬ್ಬರು ಮೃತಪಟ್ಟ ಘಟನೆ ನಿನ್ನೆ ನಡೆದಿತ್ತು.

ಅರಸೀಕೆರೆ ತಾಲೂಕಿನ ಗಂಡಸಿ ಹೋಬಳಿಯ ನಿಲಗುಂದ-ಹೊಸಳ್ಳಿ ಗ್ರಾಮದ ಕೆರೆಯಲ್ಲಿ ಜಾನುವಾರುಗಳ ಮೈ ತೊಳೆಯುತ್ತಿದ್ದಾಗ ಕಾಲು ಜಾರಿದ್ದು ಪ್ರತೀಕ್ (10) ಹಾಗೂ ಪ್ರಭಾಕರ್ (45) ಈಜು ಬರದೇ ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದರು. ಬೇಸಿಗೆ ರಜೆ ಹಿನ್ನೆಲೆಯಲ್ಲಿ ಪ್ರತೀಕ್ ರಜೆಗಾಗಿ ಮಾವ ಪ್ರಭಾಕರನ ಮನೆಗೆ ಬಂದಿದ್ದ. ಮಾವ ಮತ್ತು ಅಳಿಯ ಜಾನುವಾರುಗಳ ಮೈ ತೊಳೆಯಲು ಕೆರೆಗೆ ತೆರಳಿದ್ದರೆ, ಉಳಿದ ಕುಟುಂಬಸ್ಥರು ಕೃಷಿ ಚಟುವಟಿಕೆ ನಿಮಿತ್ತ ಗದ್ದೆಗೆ ತೆರಳಿದ್ದರು. ಈ ವೇಳೆ ಅವಘಡ ಸಂಭವಿಸಿದೆ.

# ತೃತೀಯ ಭಾಷೆಗಳಿಗೆ ಗ್ರೇಡ್ ಬದಲು ಅಂಕಗಳನ್ನೇ ನೀಡಲು ಹೈಕೋರ್ಟ್ ಆದೇಶ

**ಬೆಂಗಳೂರು,ಏ.21-**ಪ್ರಸಕ್ತ ಸಾಲಿನಲ್ಲಿ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ನಡೆಸುವ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹಿಂದಿ ಸೇರಿದಂತೆ ತೃತೀಯ ಭಾಷೆಗಳಿಗೆ ಅಂಕಗಳ ಬದಲು ಗ್ರೇಡ್ ನೀಡಲು ಮುಂದಾಗಿದ್ದ ರಾಜ್ಯ ಸರ್ಕಾರದ ಕ್ರಮಕ್ಕೆ ಹೈಕೋರ್ಟ್‌ನಲ್ಲಿ ತೀವ್ರ ಹಿನ್ನಡೆಯಾಗಿದ್ದು, ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಅಂಕಗಳನ್ನು ನೀಡುವ ಪದ್ಧತಿ ಮುಂದುವರಿಸಬೇಕು ಎಂದು ಸೂಚನೆ ನೀಡಿದೆ.

ಇತ್ತೀಚೆಗೆ ಅಂಕಗಳನ್ನೇ ನೀಡಬೇಕೆಂದು ನಿರ್ದೇಶನ ನೀಡಿದ್ದ ಹೈಕೋರ್ಟ್ ಆದೇಶದ ಕ್ರಮವನ್ನು ಮರುಪರಿಶೀಲಿಸುವಂತೆ ಕೋರಿ ರಾಜ್ಯ ಸರ್ಕಾರ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿತ್ತು. ಈ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಇ.ಎಸ್.ಇಂದಿರೇಶ್ ಅವರ ಏಕಸದಸ್ಯ ಪೀಠ ಈ ಆದೇಶ ನೀಡಿದೆ.

ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಅಧಿಸೂಚನೆ ಹೊರಡಿಸಿದಾಗಲೇ ಅಂಕಗಳ ಬದಲಿಗೆ ಗ್ರೇಡ್ ನೀಡುವುದಾಗಿ ಸ್ಪಷ್ಟಪಡಿಸಬೇಕಿತ್ತು. ಆದರೆ, ಅಧಿಸೂಚನೆಯಲ್ಲಿ ತಿಳಿಸದ ಅಂಶವನ್ನು ಪರಿಚಯಿಸಿ ಗ್ರೇಡ್ ಪದ್ಧತಿಯನ್ನು ಅನುಷ್ಠಾನಕ್ಕೆ ಮುಂದಾಗಿದ್ದೀರಿ. ನಿಯಮ ರೂಪಿಸಿದ ಬಳಿಕ ಸರ್ಕಾರ ಸೂಕ್ತವೆನಿಸಿದ ಕ್ರಮ ಕೈಗೊಳ್ಳಬಹುದು. ನಿಯಮ ರೂಪಿಸುವ ಮುಂಚಿನ ಪರೀಕ್ಷೆಯ ಅಂಕ ಪದ್ಧತಿ ಬದಲಾವಣೆ ಸೂಕ್ತವಲ್ಲ ಎಂದು ತಿಳಿಸಿದ ಪೀಠ, 2025-26ನೇ ಸಾಲಿಗೆ ಹಿಂದಿ ಭಾಷೆ ಸೇರಿದಂತೆ ತೃತೀಯ ಭಾಷೆಗಳಿಗೆ ಅಂಕಗಳನ್ನೇ ನೀಡುವುದನ್ನು ಮುಂದುವರೆಸಬೇಕು ಎಂದು ಸೂಚಿಸಿ ಅರ್ಜಿ ಇತ್ಯರ್ಥಪಡಿಸಿದೆ.

ಇದಕ್ಕೂ ಮುನ್ನ ಸರ್ಕಾರದ ಪರವಾಗಿ ವಾದ ಮಂಡಿಸಿದ ಅಡ್ವೊಕೇಟ್ ಜನರಲ್ ಶಶಿಕಿರಣ್ ಶೆಟ್ಟಿ,



ಇದೇ ಅಂಶವನ್ನು ಪ್ರಶ್ನಿಸಿ ವಿಭಾಗೀಯ ಪೀಠದಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿತ್ತು. ಈ ಅರ್ಜಿ ವಜಾಗೊಂಡಿದ್ದು, ಅರ್ಜಿದಾರರಿಗೆ ದಂಡ ವಿಧಿಸಲಾಗಿದೆ. ಅಲ್ಲದೆ, ಹಿಂದಿ ಭಾಷೆಯಲ್ಲಿ ಲಕ್ಷಕ್ಕೂ ಹೆಚ್ಚು ಮಂದಿ ಅನುತ್ತೀರ್ಣರಾಗುತ್ತಿದ್ದಾರೆ. ಹೀಗಾಗಿ ವಿದ್ಯಾರ್ಥಿಗಳ ಮೇಲೆ ಒತ್ತಡ ಕಡಿಮೆ ಮಾಡುವ ಸಲುವಾಗಿ ಈ ಕ್ರಮಕ್ಕೆ ಮುಂದಾಗಿದ್ದೇವೆ. ಅಗತ್ಯ ಸೂಕ್ತ ತಿದ್ದುಪಡಿಯೊಂದಿಗೆ ನಿಯಮ ರಚಿಸಲು ಸರ್ಕಾರ ಕರಡು ರೂಪಿಸುತ್ತಿದೆ ಎಂದು ಪೀಠಕ್ಕೆ ವಿವರಿಸಿದರು.

ಹಿನ್ನೆಲೆ: ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ತೃತೀಯ ಭಾಷೆ ಮತ್ತು ರಾಷ್ಟ್ರೀಯ ಕೌಶಲ್ಯ ಅರ್ಹತಾ ಚೌಕಟ್ಟು(ಎನ್‌ಎಸ್‌ಕ್ಯೂಎಫ್) ವಿಷಯಗಳಿಗೆ ಅಂಕದ ಬದಲು ಗ್ರೇಡ್ ನೀಡುವುದಾಗಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಪರೀಕ್ಷೆ ನಡೆಯುತ್ತಿದ್ದ ಸಂದರ್ಭ (ಮಾರ್ಚ್ 28)ದಲ್ಲಿ ಪ್ರಕಟಿಸಿದ್ದರು. ಆ ಕ್ರಮವನ್ನು ಪ್ರಶ್ನಿಸಿ ವಿದ್ಯಾರ್ಥಿನಿಯರಾದ ಚಿಕ್ಕಮಗಳೂರಿನ ಸಹನಾ ಆರ್.ನಾಯ್ಕ್, ಉಡುಪಿಯ ಅನುಷಾ ಮತ್ತು ಸುಧೀಕ್ಷಾ ಅವರು ಹೈಕೋರ್ಟ್‌ಗೆ ತಕರಾರು ಅರ್ಜಿ ಸಲ್ಲಿಸಿದ್ದರು.

ಅರ್ಜಿಯನ್ನು ಏ.15ರಂದು ವಿಚಾರಣೆ ನಡೆಸಿದ್ದ ನ್ಯಾಯಮೂರ್ತಿ ಇ.ಎಸ್.ಇಂದಿರೇಶ್ ಅವರ ಪೀಠ, 2025-26ರ ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಅಧಿಸೂಚನೆ ಹೊರಡಿಸಿದ ಸಂದರ್ಭದಲ್ಲಿ ಚಾಲ್ತಿಯಲ್ಲಿದ್ದ ನಿಯಮದಂತೆ ಮೌಲ್ಯಮಾಪನ ನಡೆಸಬೇಕು. ಹಿಂದಿ ಸೇರಿ ತೃತೀಯ ಭಾಷೆಗಳ ವಿಷಯಗಳಿಗೆ ಗ್ರೇಡ್ ಬದಲಾಗಿ ಅಂಕ ನೀಡಬೇಕು ಎಂದು ರಾಜ್ಯ ಸರ್ಕಾರಕ್ಕೆ ಸೂಚಿಸಿ, ಅರ್ಜಿ ಇತ್ಯರ್ಥ ಮಾಡಿತ್ತು.

ಈ ಆದೇಶದ ಮರುಪರಿಶೀಲನೆ ಕೋರಿದ್ದ ಸರ್ಕಾರ, ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ (ಕೆಎಸ್‌ಇಎಬಿ) ನಿಯಮಗಳಿಗೆ ತಿದ್ದುಪಡಿ ತರಲು ಈಗಾಗಲೇ ಕರಡು ಅಧಿಸೂಚನೆ (ಏ.10 ರಂದು)ಯನ್ನು ವಿಶೇಷ ಗೆಜೆಟ್‌ನಲ್ಲಿ ಪ್ರಕಟಿಸಿದೆ.

ಈ ಅಂಶವನ್ನು ಅರ್ಜಿದಾರರು ನ್ಯಾಯಾಲಯದ ಗಮನಕ್ಕೆ ತರದೇ ಆದೇಶ ಪಡೆದುಕೊಂಡಿದ್ದಾರೆ. ಅದೇ ರೀತಿ, ಮೂಲ ತಕರಾರು ಅರ್ಜಿ ಸಂಬಂಧ್ ನ್ಯಾಯಾಲಯಕ್ಕೆ ತನ್ನ ಆಕ್ಷೇಪಣೆಗಳನ್ನು ಸಲ್ಲಿಸಲು ಸರ್ಕಾರಕ್ಕೆ ಅವಕಾಶವೇ ಸಿಕ್ಕಿಲ್ಲ. ಅರ್ಜಿದಾರರು ಕರಡು ಅಧಿಸೂಚನೆಯನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಿಲ್ಲ ಎಂದು ಆಕ್ಷೇಪ ವ್ಯಕ್ತಪಡಿಸಿದೆ.

ಗ್ರಾಮೀಣ ಮತ್ತು ನಗರ ಪ್ರದೇಶದ ವಿದ್ಯಾರ್ಥಿಗಳ ನಡುವೆ ಸಮಾನ ಅವಕಾಶ ಕಲ್ಪಿಸಲು ಹಾಗೂ ಪರೀಕ್ಷಾ ಒತ್ತಡವನ್ನು ಕಡಿಮೆ ಮಾಡಲು ತೃತೀಯ ಭಾಷೆ ಮತ್ತು ಎನ್‌ಎಸ್‌ಕ್ಯೂಎಫ್ ವಿಷಯಗಳಿಗೆ ಅಂಕಗಳ ಬದಲಾಗಿ ಗ್ರೇಡ್ ನೀಡಲು ಉದ್ದೇಶಿಸಲಾಗಿದೆ.

ಅಂಕದ ಬದಲು ಗ್ರೇಡ್ ನೀಡುವುದು ಸುಧಾರಣಾ ಕ್ರಮವಾಗಿದೆ. ಇದು ಹೆಚ್ಚಿನ ವಿದ್ಯಾರ್ಥಿಗಳಿಗೆ ಪ್ರಯೋಜನಕಾರಿಯಾಗಿದೆ. ಸರ್ಕಾರದ ನಡೆಯಿಂದ ತೃತೀಯ ಭಾಷೆ ತಿರಸ್ಕಾರಕ್ಕೆ ಒಳಗಾಗುತ್ತದೆ ಎಂಬ ವಾದದಲ್ಲಿ ಹುರುಳಿಲ್ಲ. ಆದ್ದರಿಂದ ಏ.15ರಂದು ಹೊರಡಿಸಿರುವ ಆದೇಶವನ್ನು ಮರು ಪರಿಶೀಲಿಸಬೇಕು ಎಂದು ಸರ್ಕಾರ ಕೋರಿತ್ತು.

# ಕಾಂಗ್ರೆಸ್‌ನವರ ಮೇಲೆ ಮಾತ್ರ ಇ.ಡಿ ದಾಳಿ, ಬಿಜೆಪಿ ಮುಖಂಡರ ಮೇಲೆ ಏಕಿಲ್ಲ?-ಸಿಎಂ



**ಚಾಮರಾಜನಗರ,ಏ.21-**ಕೇಂದ್ರ ಸರ್ಕಾರ ಕಾಂಗ್ರೆಸ್‌ನವರನ್ನು ಮಾತ್ರ ಗುರಿಯಾಗಿಸಿಕೊಂಡು ದಾಳಿ ಮಾಡಿಸುತ್ತಿದ್ದು, ಬಿಜೆಪಿಯವರ ಮೇಲೆ ದಾಳಿ ಆಗುತ್ತಿಲ್ಲ ಎಂದು ಸಿಎಂ ಸಿದ್ದರಾಮಯ್ಯ ವಾಗ್ದಾಳಿ ನಡೆಸಿದರು. ಶಾಸಕ ಹ್ಯಾರಿಸ್ ಪುತ್ರ ನಲಪಾಡ್ ಅವರ ಮನೆ ಮೇಲೆ ಜಾರಿ ನಿರ್ದೇಶನಾಲಯ (ಇ.ಡಿ)ದ ಅಧಿಕಾರಿಗಳು ನಿನ್ನೆ ದಾಳಿ ನಡೆಸಿರುವ ಕುರಿತ ಪ್ರಶ್ನೆಗೆ ಅವರು ಉತ್ತರಿಸಿದರು.

ಮೂಢನಂಬಿಕೆಗಳ ಬಗ್ಗೆ ನನಗೆ ನಂಬಿಕೆ ಇಲ್ಲ. ಹಾಗಾಗಿ ಚಾಮರಾಜನಗರಕ್ಕೆ ಸಾಕಷ್ಟು ಬಾರಿ ಭೇಟಿ ನೀಡುತ್ತಿದ್ದೇನೆ. ಇಲ್ಲಿಗೆ ಬಂದರೆ ಕುರ್ಚಿ ಗಟ್ಟಿಯಾಗುತ್ತದೆ ಎಂದು ಪ್ರಾಸಂಗಿಕವಾಗಿ ಹೇಳಿದ್ದೆ ಎಂದರು.

ಗ್ಯಾರಂಟಿ ಯೋಜನೆಗಳನ್ನು ವಿರೋಧಿಸುತ್ತಿದ್ದವರೇ ಅದನ್ನು ಘೋಷಣೆ ಮಾಡುತ್ತಿರುವ ಬಗ್ಗೆ ಪ್ರತಿಕ್ರಿಯಿಸಿ, ವಿರೋಧಿಸುತ್ತಿದ್ದವರಿಗೆ ಗ್ಯಾರಂಟಿಗಳು ಬಡವರ ಕಾರ್ಯಕ್ರಮಗಳೆಂದು ಗೊತ್ತಾಗಿದೆ ಎಂದು ಹೇಳಿದರು.

ನಾರಿ ಶಕ್ತಿ ವಂದನ್ ವಿರೋಧಿಸಿದ ಕಾಂಗ್ರೆಸ್ ಮಹಿಳಾ ವಿರೋಧಿಗಳು ಎಂಬ ಬಿಜೆಪಿ ಆರೋಪಕ್ಕೆ, ಬಿಜೆಪಿಯವರೇ ಮಹಿಳಾ ಮೀಸಲಾತಿ ವಿರೋಧಿಗಳು. ರಾಜೀವ್ ಗಾಂಧಿ ಪ್ರಧಾನಿಯಾಗಿದ್ದ ಸಂದರ್ಭದಲ್ಲಿ ಸಂವಿಧಾನಕ್ಕೆ 73, 74ನೇ ತಿದ್ದುಪಡಿಗಳನ್ನು ಮಾಡಿ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳಾ ಮೀಸಲಾತಿ ತಂದರು. ಅದನ್ನು ರಾಜ್ಯಸಭೆಯಲ್ಲಿ ಕೆಡವಿದವರು ಇವರು. ಎನ್‌ಡಿಎ ಈಗ ರಾಜಕೀಯಕ್ಕಾಗಿ ಕ್ಷೇತ್ರ ಮರುವಿಂಗಡನೆ ಸೇರಿಸಿ ಮೀಸಲಾತಿ ಮಸೂದೆ ಮಂಡಿಸಿದ್ದಾರೆ. ನಮ್ಮದು ಕ್ಷೇತ್ರ ಮರುವಿಂಗಡಣೆಗೆ ವಿರೋಧವೇ ಹೊರತು ಮಹಿಳಾ ಮೀಸಲಾತಿಗೆ ಅಲ್ಲ ಎಂದು ಸ್ಪಷ್ಟಪಡಿಸಿದರು.

ತೃತೀಯ ಭಾಷೆಗೆ ಅಂಕ ಕೊಡಬೇಕೆಂಬ ನ್ಯಾಯಾಲಯದ ನಿರ್ದೇಶನವನ್ನು ಪಾಲಿಸಲಾಗುವುದು. ತೃತೀಯ ಭಾಷೆಗೆ ಹಿಂದಿನ ವರ್ಷಗಳಂತೆಯೇ ಮೌಲ್ಯಮಾಪನ ಮಾಡಿ ಅಂಕಗಳನ್ನು ನೀಡಬೇಕೆಂದು ಉಚ್ಚ ನ್ಯಾಯಾಲಯ ಹೇಳಿ ಮುಂದಿನ ತೀರ್ಮಾನ ಮಾಡಲು ಸೂಚಿಸಿದ್ದು, ನ್ಯಾಯಾಲಯದ ನಿರ್ದೇಶನ ಪಾಲಿಸುತ್ತೇವೆ ಎಂದರು.

ತಮ್ಮನ್ನು ಕಡೆಗಣಿಸುತ್ತಿದ್ದಾರೆಂದು ಹೈಕಮಾಂಡ್‌ಗೆ ಅಲ್ಪಸಂಖ್ಯಾತರು ಪತ್ರ ಬರೆದಿರುವ ಬಗ್ಗೆ ಮಾತನಾಡಿ, ವರಿಷ್ಠರು ತೀರ್ಮಾನ ಕೈಗೊಳ್ಳುವಾಗ ಅಲ್ಪಸಂಖ್ಯಾತರ ನಾಯಕರು ಉಪಸ್ಥಿತರಿದ್ದರು. ಅವರೆದುರೇ ತೀರ್ಮಾನವಾಗಿತ್ತು, ನಂತರ ಅವರು ವಿರೋಧಿಸಿದರು ಎಂದು ಹೇಳಿದರು.

ಇದೇ ವೇಳೆ, ದಾವಣಗೆರೆ ಮತ್ತು ಬಾಗಲಕೋಟೆ ಕ್ಷೇತ್ರದ ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಗೆಲುವು ಸಾಧಿಸಲಿದ್ದಾರೆ ಎಂದು ಸಿದ್ದರಾಮಯ್ಯ ವಿಶ್ವಾಸ ವ್ಯಕ್ತಪಡಿಸಿದರು.

# ಸಿದ್ದರಾಮಯ್ಯ ಟಗರು ಮುಂಚೆ ಹೇಗಿದ್ರೋ ಈಗಲೂ ಹಾಗೇ ಇದ್ದಾರೆ, ಟಗರು ಯಾವತ್ತೂ ಟಗರೇ-ಜಮೀರ್ ಅಹಮದ್

**ಬೆಂಗಳೂರು,ಏ.21-**ಸಿದ್ದರಾಮಯ್ಯ ಟಗರು ಮುಂಚೆ ಹೇಗಿದ್ರು ಈಗಲೂ ಹಾಗೇ ಇದ್ದಾರೆ. ಟಗರು ಟಗರೇ. ಅವರು ಮಾತನಾಡಿದರೆ ಬೇರೆ ತರಹ ಸೌಂಡ್ ಆಗುತ್ತದೆ ಎಂದು ಸಚಿವ ಜಮೀರ್ ಅಹಮದ್ ಖಾನ್ ತಿಳಿಸಿದರು.

ನಗರದಲ್ಲಿಂದು ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಸಿದ್ದರಾಮಯ್ಯನವರು ತಮ್ಮ ಆಪ್ತರು ಟಾರ್ಗೆಟ್ ಆದರೂ ಸೈಲೆಂಟ್ ಆಗಿದ್ದಾರೆ ಎಂಬ ವಿಚಾರವಾಗಿ ಪ್ರತಿಕ್ರಿಯಿಸುತ್ತಾ, ಸಿಎಂಗೆ ಎಲ್ಲರೂ ಆಪ್ತರೇ. ಅವರು ನಮ್ಮ ಮುಖ್ಯಮಂತ್ರಿ. ಸಿಎಂ ಈಗ ಸೈಲೆಂಟ್ ಆಗಿರಬಹುದು, ಆದ್ರೆ ಅವರು ಮಾತನಾಡಿದರೆ ಬೇರೆ ತರಹ ಸೌಂಡ್ ಆಗುತ್ತದೆ. ಈಗ ಮಾತನಾಡುವ ಅಗತ್ಯ ಇಲ್ಲ ಎಂದರು.

ಮುಸ್ಲಿಂ ಗುರುಗಳು ಪತ್ರ ಬರೆದ ವಿಚಾರವಾಗಿ ಪ್ರತಿಕ್ರಿಯಿಸಿ, ನಾನು ಮಾಧ್ಯಮಗಳಲ್ಲಿ ಪತ್ರವನ್ನು ನೋಡಿದ್ದೇನೆ. 15, 16 ಜನ ಗುರುಗಳು ರಾಹುಲ್ ಗಾಂಧಿಗೆ ಪತ್ರ ಬರೆದಿರೋದನ್ನು ಗಮನಿಸಿದೆ. ಮುಖ್ಯಮಂತ್ರಿ, ಉಪಮುಖ್ಯಮಂತ್ರಿಗಳಿಗೆ ಮಲ್ಲಿಕಾರ್ಜುನ ಖರ್ಗೆಗೂ ಪತ್ರ ಬರೆದಿದ್ದಾರೆ. ಅವರು ಅವರ ಅಭಿಪ್ರಾಯವನ್ನು ಹೇಳಿದ್ದಾರೆ. ನೀವು ಅವರನ್ನೇ ಕೇಳಬೇಕು. ಅವರ ಅಭಿಪ್ರಾಯವನ್ನು ನಾನು ಹೇಳೋಕೆ ಬರಲ್ಲ. ಪತ್ರ ಬರೆದವರು ಗುರುಗಳಿಗೆ ಈ ಪ್ರಶ್ನೆಯನ್ನು ಕೇಳಬೇಕು. ಯಾವ ಕಾರಣಕ್ಕೆ ಪತ್ರ ಬರೆದಿದ್ದೀರ ಅಂತ ಅವರನ್ನೇ ಕೇಳಬೇಕು. ಯಾವುದೇ ತಾರತಮ್ಯ ಆಗಿಲ್ಲ. ಎಲ್ಲರನ್ನೂ ಸಮಾನವಾಗಿ ತೆಗೆದುಕೊಂಡು ಹೋಗಲಾಗುತ್ತಿದೆ. ಒಬ್ಬೊಬ್ಬರು ಒಬ್ಬೊಬ್ಬರ



ಪರ ಮಾತನಾಡುತ್ತಿದ್ದಾರೆ. ಒಬ್ಬರು ನನ್ನ ಪರ ಮಾತನಾಡುತ್ತಾರೆ, ಇನ್ನೊಬ್ಬರು ಮತ್ತೊಬ್ಬರ ಪರ ಮಾತನಾಡುತ್ತಾರೆ. ಅದನ್ನೆಲ್ಲ ಪರಿಗಣಿಸಬೇಕಾಗಿಲ್ಲ ಎಂದು ಹೇಳಿದರು.

ಎಲ್ಲರ ಅಭಿಪ್ರಾಯ ಏನು ಅಂದ್ರೆ, ಅಬ್ದುಲ್ ಜಬ್ಬಾರ್ ವಿಚಾರ ಇರಬಹುದು, ನಜೀರ್ ಅಹ್ಮದ್ ಅವರೇ ಇರಬಹುದು. ನಜೀರ್ ಅಹಮದ್ ಮೋಸ್ಟ್ ಸೀನಿಯರ್ ಇದ್ದಾರೆ. ಅವರು ಪಕ್ಷ ವಿರೋಧ ಚಟುವಟಿಕೆ ಮಾಡಿದ್ದರೆ ಅದಕ್ಕೆ ಒಂದು ಪ್ರೊಸೀಜರ್ ಇದೆ. ಮೊದಲು ನೋಟಿಸ್ ಕೊಡಬೇಕಿತ್ತು. ರಿಪ್ಲೈ ತೆಗೆದುಕೊಳ್ಳಬೇಕಾಗಿತ್ತು. ಆನಂತರ ಅಮಾನತು ಮಾಡಬೇಕಾಗಿತ್ತು ಅಂತ ಅಭಿಪ್ರಾಯ ಇದೆ. ಅವರು ಪಕ್ಷ ವಿರೋಧಿ ಕೆಲಸ ಮಾಡಿದ್ರೆ, ತೆಗೆದಿದ್ದು ತಪ್ಪು ಅಂತ ನಾನು ಹೇಳಲ್ಲ ಎಂದರು.

ಪಕ್ಷ ಏನಾದ್ರೂ ತೀರ್ಮಾನ ಮಾಡಿದ್ರೆ, ಯೋಚನೆ ಮಾಡಿ ಮಾಡಿರುತ್ತದೆ. ಒಂದು ನೋಟಿಸ್ ಕೊಟ್ಟು ಅವರ ರಿಪ್ಲೈ ತೆಗೆದುಕೊಂಡು ಆನಂತರ ತೀರ್ಮಾನ ತೆಗೆದುಕೊಳ್ಳಬೇಕಾಗಿತ್ತು. ಇದು ಸತೀಶ್ ಜಾರಕಿಹೊಳಿ ಅಭಿಪ್ರಾಯ. ಎಲ್ಲರ ಅಭಿಪ್ರಾಯ ಕೂಡ ಇದೇ ಎಂದು ಜಮೀರ್ ಅಹಮದ್ ತಿಳಿಸಿದರು.

ಅಬ್ದುಲ್ ಜಬ್ಬಾರ್, ನಜೀರ್ ಅಹಮದ್ ವಿರುದ್ಧದ ಕ್ರಮವನ್ನು ವಾಪಸ್ ತೆಗೆದುಕೊಳ್ಳಬೇಕು ಎಂಬ ವಿಚಾರವಾಗಿ ಪ್ರತಿಕ್ರಿಯಿಸಿ, ನಾನು ಹೇಳುವುದು ಒಂದು ನಿಯಮದ ಪ್ರಕಾರ ಮಾಡಬೇಕು. ಆತುರಾತುರವಾಗಿ ಮಾಡೋದು ಅಗತ್ಯ ಇರಲಿಲ್ಲ ಅಂತ ಹೇಳುತ್ತಿದ್ದಾರೆ ಎಂದರು.

ಪತ್ರದಲ್ಲಿ ಮುಂದಿನ ಚುನಾವಣೆಯಲ್ಲಿ ಪಾಠ ಕಲಿಸ್ತೇವೆ ಎಂಬ ಉಲ್ಲೇಖ ವಿಚಾರವಾಗಿ ಮಾತನಾಡಿ, ರಾಜಕೀಯ ಗುರುಗಳು, ಧಾರ್ಮಿಕ ಗುರುಗಳು ಅಸಮಾಧಾನಗೊಂಡಿರೋದು ನಿಜ. ನಾವು ಮಾತನಾಡಿ ಎಲ್ಲವನ್ನೂ ಸರಿಪಡಿಸುತ್ತೇವೆ. ಯಾರು ಪತ್ರ ಬರೆದಿದ್ದಾರೋ ಅವರಿಗೆ ತಾನೆ ಕೇಳಬೇಕು. ಸರ್ಕಾರ ಯಾವುದೇ ರೀತಿ ತಾರತಮ್ಯ ಮಾಡಿಲ್ಲ. ಬಜೆಟ್‌ನಲ್ಲಿ ₹1200 ಕೋಟಿ ಇತ್ತು. ಈಗ ₹4,900 ಕೋಟಿ ಕೊಟ್ಟಿದ್ದಾರೆ ಅವರು ಸಮರ್ಥಿಸಿಕೊಂಡರು.

ಕೆಪಿಸಿಸಿ ಅಲ್ಪಸಂಖ್ಯಾತರ ಮುಖಂಡರ ಮಾಧ್ಯಮಗೋಷ್ಠಿ ವಿಚಾರವಾಗಿ ಪ್ರತಿಕ್ರಿಯಿಸುತ್ತಾ, ಅವರ ಬಳಿ ಯಾರದ್ದು ದಾಖಲೆ ಇದೆ ಕೊಡಲಿ. ಯಾರು ಮಾಡಿದ್ದಾರೆ ಅನ್ನೋದನ್ನು ಬಹಿರಂಗಪಡಿಸಲಿ. ಯಾರು ಮಾಡಿದ್ದಾರೆ ಅನ್ನೋದನ್ನು ಹೇಳಬೇಕು. ನನ್ನ ಹೆಸರು ಹೇಳಿದ್ರೆ ನಾನು ಉತ್ತರ ಕೊಡುತ್ತಿದ್ದೆ. ಅಡ್ಡ ಗೋಡೆ ಮೇಲೆ ದೀಪ ಇಟ್ಟು ಹೇಳಿದ್ರೆ ಯಾರು ಅಂತ ಹೇಳಲಿ ಎಂದು ಸಚಿವ ಜಮೀರ್ ಸವಾಲು ಹಾಕಿದರು.

ನಾನು ಜೆಡಿಎಸ್‌ಗೆ ಹೋಗೋದು ಊಹಾಪೋಹದ ಸುದ್ದಿ. ನನಗೆ ಕಾಂಗ್ರೆಸ್ ಯಾವ ರೀತಿಯಲ್ಲಿ ಕಡಿಮೆ ಮಾಡಿಲ್ಲ. 2018ರಲ್ಲಿ ಸಮ್ಮಿಶ್ರ ಸರ್ಕಾರದಲ್ಲೂ ಸಚಿವನಾಗಿದ್ದೆ. ಆ ಟೈಮಲ್ಲಿ ಪಕ್ಷ ನನ್ನ ಮಂತ್ರಿ ಮಾಡಿ 5 ಖಾತೆ ಕೊಟ್ಟಿದ್ದರು. ನಾನು ಕಾಂಗ್ರೆಸ್ ಪಕ್ಷದಲ್ಲಿ ನಿರೀಕ್ಷೆ ಕೂಡ ಇಟ್ಟಿರಲಿಲ್ಲ. ನನಗೆ 5 ಖಾತೆಯನ್ನು ಕೊಟ್ಟಿದ್ದರು. 2023ರಲ್ಲಿ ನಾಲ್ಕು ಖಾತೆ ಕೊಟ್ಟಿದ್ದಾರೆ. ನನಗೆ ಕಾಂಗ್ರೆಸ್ ಪಕ್ಷ ಏನೂ ಕಡಿಮೆ ಮಾಡಿಲ್ಲ. ರೋಷನ್ ಬೇಗ್, ತನ್ವೀರ್ ಸೇಠ್, ಹ್ಯಾರಿಸ್ ಅಂತ ಸೀನಿಯರ್ ಇದ್ರು, ಅವರನ್ನು ಬಿಟ್ಟು ನನ್ನನ್ನ ಸಚಿವನನ್ನಾಗಿ ಮಾಡಿದ್ದರು. ಅದನ್ನು ನಾನು ಮರೆಯೋಕಾಗಲ್ಲ, ಕುಮಾರಸ್ವಾಮಿಯವರ ಜೊತೆ ನಾನ್ಯಾಕೆ ಮಾತನಾಡಲಿ. ಅದೆಲ್ಲ ಊಹಾಪೋಹಾ ಎಂದು ಅವರು ನಿರಾಕರಿಸಿದರು.

ಪಕ್ಷ ನನಗೆ ಏನೂ ಕಡಿಮೆ ಮಾಡಿಲ್ಲ, ಅದಕ್ಕಿಂತ ಹೆಚ್ಚು ನನಗೇನು ಬೇಕಿಲ್ಲ. ಪಕ್ಷ ವಿರೋಧಿ ಚಟುವಟಿಕೆ ಇಂಥವರು ಮಾಡಿದ್ದಾರೆ ಅಂತ ಹೇಳಲಿ. ಯಾರಾದರೂ ಇದುವರೆಗೂ ಇಂಥವರು ಮಾಡಿದ್ದಾರೆ ಅಂತ ಹೇಳಿಲ್ಲ. ಪಕ್ಷದ ಮೇಲೆ ಅಭಿಮಾನ ಇದ್ರೆ ಇಂಥವರು ಮಾಡಿದ್ದಾರೆ ಅಂತ ಹೆಸರು ಹೇಳಲಿ ಎಂದರು.

ಶಾಸಕ ಹ್ಯಾರಿಸ್ ಮೇಲ್ ಇಡಿ ರೇಡ್ ವಿಚಾರವಾಗಿ ಮಾತನಾಡಿ, ಬಿಜೆಪಿಯವರ ಮೇಲೆ ಇಡಿ ರೇಡ್ ಆಗಲ್ಲ. ಇಡೀ ದೇಶದಲ್ಲಿ ಕಾಂಗ್ರೆಸ್‌ನವರೇ ಸಿಗೋದು. ನನ್ನ ಮನೆ ಮೇಲೂ ರೇಡ್ ಆಗಿತ್ತು. ಸಾಕಷ್ಟು ಜನ ಕಾಂಗ್ರೆಸ್ ನಾಯಕರ ಮನೆ ಮೇಲೆ ಆಗಿದೆ. ಎಲ್ಲಾದರೂ ಬಿಜೆಪಿ ನಾಯಕರ ಮೇಲೆ ರೇಡ್ ಆಗಿರೋದು ತೋರಿಸಿ ನೋಡೋಣ. ರೇಡ್ ಮಾಡಿದ್ದು ತಪ್ಪು ಅಂತ ಹೇಳಲ್ಲ.


ಅವರು ಮಾಡಿದರೆ ತನಿಖೆ ನಡೆಸಲಿ, ಸತ್ಯಾಂಶ ಹೊರಗೆ ಬರಲಿ. ಆದರೆ ಬಿಜೆಪಿಯವರಿಗೆ ಏನು ಮಾಡುತ್ತಿಲ್ಲ. ಬಿಜೆಪಿಯವರು ಏನು ಸತ್ಯಹರಿಶ್ಚಂದ್ರರಾ..?. ನಮ್ಮ ರಾಜ್ಯದಲ್ಲೇ 2008ರಲ್ಲಿ ಬಿಜೆಪಿ ಅಧಿಕಾರಕ್ಕೆ ಬರುವ ಮುಂಚೆ ಹೇಗಿದ್ರು?. ಈಗ ಏನೇನಾಗಿದ್ದಾರೆ ಅಂತ ಬೇಕಾದ್ರೆ, ನಿಮಗೆ ಲಿಸ್ಟ್ ಕೊಡ್ತೇನೆ. ಅದೆಲ್ಲ ಅವರಿಗೆ ಕಾಣಲ್ಲ. ಕೇವಲ ಕಾಂಗ್ರೆಸ್ ನವರು ಮಾತ್ರ ಕಾಣುತ್ತಾರೆ. ಬೇಕಂತಲೇ ಕಾಂಗ್ರೆಸ್‌ನವರನ್ನು ಟಾರ್ಗೆಟ್ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

# ಎನ್‌ಡಿಎಗೆ ಮತ ಹಾಕಿದರೆ, ಸ್ಟಾಲಿನ್ ಒಳ್ಳೆಯ ಕೆಲಸಗಳು ಅಳಿಸಿ ಹೋಗುತ್ತವೆ-ಕೇಜ್ರಿವಾಲ್

**ಚೆನ್ನೈ(ತಮಿಳುನಾಡು),ಏ.21-**ತಮಿಳುನಾಡು ಜನತೆ ತಪ್ಪಾಗಿಯೂ ಎನ್‌ಡಿಎ ಮೈತ್ರಿಗೆ ವೋಟ್ ಹಾಕಿದ ರೆ, ಡಿಎಂಕೆ ಮುಖ್ಯಸ್ಥ ಎಂ.ಕೆ.ಸ್ಟಾಲಿ ನ್ ಅವಧಿಯ ಎಲ್ಲಾ ಉತ್ತಮ ಕೆಲಸಗಳೂ ಅಳಿಸಿ ಹೋಗುತ್ತವೆ ಎಂ ದು ಆಮ್ ಆದ್ಮಿ ಪಕ್ಷ(ಎಎಪಿ)ದ ನಾಯಕ ಅರವಿಂದ್ ಕೇಜ್ರಿವಾಲ್ ಎಚ್ಚರಿಸಿದ್ದಾರೆ.

ಗುಜರಾತ್ ಬಿಜೆಪಿ ಸರ್ಕಾರವನ್ನು ಟೀಕಿಸಿದ ಕೇಜ್ರಿವಾಲ್, 30 ವರ್ಷದ ಆಡಳಿತದ ಹೊರತಾಗಿ ರಸ್ತೆ, ಶಾಲೆ ಮತ್ತು ಆಸ್ಪತ್ರೆಗಳ ಸುಧಾರಣೆ ಆಗಿಲ್ಲ. ಎಲ್ಲೆಲ್ಲಿ ಬಿಜೆಪಿ ಆಡಳಿತ ನಡೆಸುತ್ತದೆಯೋ ಅಲ್ಲೆಲ್ಲಾ ವ್ಯವಸ್ಥೆಯನ್ನು ಹಾಳು ಮಾಡಿದೆ. ದೆಹಲಿಯಲ್ಲಿ ನಮ್ಮ ಸರ್ಕಾರದ ಉತ್ತಮ ಕೆಲಸಗಳನ್ನು ಬಿಜೆಪಿ ಅಳಿಸಿ ಹಾಕಿದೆ ಎಂದು ಆರೋಪಿಸಿದರು.

ಕಳೆದ ವರ್ಷ ದೆಹಲಿ ಜನರು ಬಿಜೆಪಿಗೆ ಮತ ಹಾಕಿದರು. ಇದೀಗ ಅವರು ಬಿಜೆಪಿ ಸರ್ಕಾರದಿಂದ ಬೇಸತ್ತಿದ್ದಾರೆ. ಶಿಕ್ಷಣ, ಆರೋಗ್ಯ, ಮೂಲಸೌಕರ್ಯ, ರಸ್ತೆ, ವಿದ್ಯುತ್ ಮತ್ತು ನೀರಿನ ಅಭಿವೃದ್ಧಿಗಾಗಿ ನಾವು ಮಾಡಿದ ಕೆಲಸಗಳನ್ನು ಬಿಜೆಪಿ ಅಳಿಸಿ ಹಾಕಿದೆ. ತಪ್ಪಿಯೂ ಕೂಡ ಜನರು ಬಿಜೆಪಿ ಅಥವಾ ಎನ್‌ಡಿಎ ಅಥವಾ ಎಐಎಡಿಎಂಕೆಗೆ ಮತ ಹಾಕಿದ್ದೇ ಆದಲ್ಲಿ ಕಳೆದ ಐದು ವರ್ಷದಲ್ಲಿ ಸಿಎಂ ಸ್ಟಾಲಿನ್ ಮಾಡಿದ ಕೆಲಸಗಳು ಸಮಯಾವಕಾಶವಿಲ್ಲದೆ ಅಳಿಸಿ



ಹೋಗುತ್ತವೆ ಎಂದರು.

ಡಿಎಂಕೆ ಸರ್ಕಾರದ ಉತ್ತಮ ಯೋಜನೆಗಳು ಮುಂದುವರೆಯಬೇಕೆಂದರೆ ಜನರು ಡಿಎಂಕೆ ಪರ ಮತ ಹಾಕಬೇಕು ಎಂದು ಮನವಿ ಮಾಡಿದರು.

ತಮಿಳುನಾಡಿನ ಜನರು ಬಿಜೆಪಿ ಸರ್ಕಾರವನ್ನು ದ್ವೇಷಿಸುತ್ತಾರೆ ಎಂದ ಕೇಜ್ರಿವಾಲ್, ಬಿಜೆಪಿ ವಿಭಜನೆಯ ಮತ್ತು ಕೆಟ್ಟ ರಾಜಕೀಯ ಮಾಡುತ್ತದೆ. ಇದೇ ಕಾರಣಕ್ಕೆ ತಮಿಳುನಾಡಿನಲ್ಲಿ ಹಲವು ವರ್ಷಗಳಿಂದಲೂ ಬಿಜೆಪಿ ಸ್ಥಾನ ಗಳಿಸಲು ಸಾಧ್ಯವಾಗಿಲ್ಲ. ಈ ಬಾರಿ ಎಐಎಡಿಎಂಕೆ ಜೊತೆಗೆ ಮೈತ್ರಿ ನಡೆಸಿ, 27 ಸೀಟುಗಳಲ್ಲಿ ಬಿಜೆಪಿ ಸ್ಪರ್ಧಿಸುತ್ತಿದೆ ಎಂದರು.

ಎನ್‌ಡಿಎ ಎಂಬುದು ಮೈತ್ರಿ ಪಕ್ಷವಲ್ಲ, ಅದು ಬಿಜೆಪಿ. ಬಿಜೆಪಿ ಜೊತೆಗೆ ಎಐಎಡಿಎಂಕೆ ಅಲ್ಲ, ಕೇವಲ ಬಿಜೆಪಿ. ರಾಜ್ಯದಲ್ಲಿ ಅವರು ಸೀಟು ಗೆಲ್ಲಲಿ, ಬಿಡಲಿ. ಅವರು ತಮ್ಮದೇ ಆದ ಸಿಎಂ ಹುಡುಕುತ್ತಾರೆ. ಬಿಹಾರದಲ್ಲಿ ಏನಾಯಿತು ಎಂಬುದು ನಿಮಗೆ ಗೊತ್ತು ಎಂದು ಹೇಳಿದರು.

ಡಿಎಂಕೆ ವಿರುದ್ಧದ ಭ್ರಷ್ಟಾಚಾರ ಆರೋಪದ ಬಗ್ಗೆ ಮಾತನಾಡಿದ ಕೇಜ್ರಿವಾಲ್, ಕೇಂದ್ರ ಸಚಿವ ಅಮಿತ್ ಶಾ ಅವರು ಮಗ ಏನು ಮಾಡುತ್ತಿದ್ದಾರೆ, ಕೇಂದ್ರ ಸಚಿವ ರಾಜ್‌ನಾಥ್ ಸಿಂಗ್ ಅವರ ಮಗ ಏನು ಮಾಡುತ್ತಿದ್ದಾರೆ ಎಂದು ಪ್ರಶ್ನಿಸಿದರು. ಇಂದು ಬಿಜೆಪಿ ಅತ್ಯಂತ ಭ್ರಷ್ಟ ಪಕ್ಷವಾಗಿದೆ. ಪ್ರಧಾನಿ ನರೇಂದ್ರ ಮೋದಿ ತಮ್ಮ ಸ್ನೇಹಿತರಿಗೆ ಎಲ್ಲವನ್ನೂ ಕೊಡುತ್ತಾರೆ ಎಂದು ಆರೋಪಿಸಿದರು.

ಕ್ಷೇತ್ರ ಪುನರ್‌ವಿಂಗಡನೆ ಮಸೂದೆಯು ಪ್ರಜಾಪ್ರಭುತ್ವದ ಮೇಲಿನ ದಾಳಿ ಎಂದಿರುವ ಅವರು, ಇದು ಪಾಸ್ ಆದಲ್ಲಿ ಪ್ರಜಾಪ್ರಭುತ್ವವನ್ನು ಹೊಸಕಿ ಹಾಕುತ್ತದೆ. ವಿಪಕ್ಷಗಳು ಈ ಮಸೂದೆಯನ್ನು ವಿಫಲಗೊಳಿಸುವ ಮೂಲಕ ಪ್ರಜಾಪ್ರಭುತ್ವ ಉಳಿಸಿದರು ಎಂದರು.

ಸ್ಟಾಲಿನ್ ಅವರನ್ನು ಶ್ಲಾಘಿಸಿದ ಎಎಪಿ ನಾಯಕ, ತಮಿಳುನಾಡಿನಲ್ಲಿ ಸ್ಟಾಲಿನ್ ಆಡಳಿತದಲ್ಲಿ ಕಲ್ಯಾಣ ಕಾರ್ಯಕ್ರಮಗಳು ಸಕ್ರಿಯವಾಗಿವೆ. ಒಕ್ಕೂಟ ಅಥವಾ ಪ್ರಜಾಪ್ರಭುತ್ವ ವ್ಯವಸ್ಥೆಗೆ ಧಕ್ಕೆಯಾದಲ್ಲಿ ಅವರ ಧ್ವನಿ ಬಲಗೊಳ್ಳುತ್ತದೆ. ಸ್ಟಾಲಿನ್ ದೇಶ, ಪ್ರಜಾಪ್ರಭುತ್ವ ಮತ್ತು ಒಕ್ಕೂಟದ ಪರ ನಿಲ್ಲುತ್ತಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

# ಯುವಕನ ಕೊಂದು ಆತನ ಹೊಸ ಕಾರಿನೊಂದಿಗೆ ಸುಟ್ಟು ಹಾಕಿದ್ರು!-ಸಂಬಂಧಿ ಸೇರಿ ಐವರು ಸೆರೆ

**ಬಾಗಲಕೋಟೆ,ಏ.21-**ಹೊಸ ಕಾರು ಖರೀದಿಸಿ ಪೂಜೆ ಮಾಡಿಸಿಕೊಂಡು ಊರಿನತ್ತ ತೆರಳುತ್ತಿದ್ದ ಯುವಕನನ್ನು ಚಾಕುವಿನಿಂದ ಇರಿದು ಬರ್ಬರವಾಗಿ ಕೊಲೆಗೈದು, ಬಳಿಕ ಕಾರು ಸಹಿತ ಸುಟ್ಟು ಹಾಕಿದ ಘಟನೆ ಜಿಲ್ಲೆಯ ಜಮಖಂಡಿ ತಾಲೂಕಿನ ಸಾವಳಗಿ ಗ್ರಾಮದಲ್ಲಿ ನಡೆದಿದೆ. ಸೋಮು ಅಲಿಯಾಸ್ ಸೋಮಲಿಂಗಪ್ಪ ಪಡಸಲಗಿ (36) ಕೊಲೆಯಾದವರು.

ಪ್ರಕರಣಕ್ಕೆ ಸಂಬಂಧಪಟ್ಟಂತೆ ಕೊಲೆಗೀಡಾದ ವ್ಯಕ್ತಿಯ ಸಂಬಂಧಿ ಸದಾಶಿವ ಪಡಸಲಗಿ, ರವಿ ಪಾಟೀಲ್ ಹಾಗೂ ನವೀನ್ ಸೇರಿದಂತೆ ಐವರು ಆರೋಪಿಗಳನ್ನು ಬಂಧಿಸಿ ವಿಚಾರಣೆ ನಡೆಸುತ್ತಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

ಅನೈತಿಕ ಸಂಬಂಧದ ಹಿನ್ನೆಲೆಯಲ್ಲಿ ಕೊಲೆ ಶಂಕೆ: ಕೊಲೆಗೆ ನಿಖರ ಕಾರಣ ತಿಳಿದು ಬಂದಿಲ್ಲ. ಮೇಲ್ನೋಟಕ್ಕೆ ಅನೈತಿಕ ಸಂಬಂಧದ ಹಿನ್ನೆಲೆಯಲ್ಲಿ ಸಂಬಂಧಿಕರೇ ಹೊಂಚು ಹಾಕಿ ಕೊಲೆ ಮಾಡಿರುವುದಾಗಿ ತಿಳಿದು ಬಂದಿದೆ ಎಂದು ಪೊಲೀಸರು ಪ್ರಕಟಣೆ ಮೂಲಕ ತಿಳಿಸಿದ್ದಾರೆ.

ಹೊಸ ಕಾರು ಖರೀದಿಸಿದ್ದ ಸೋಮಲಿಂಗಪ್ಪ ಮನೆ ದೇವರ ಪೂಜೆ ಮಾಡಿಕೊಂ ಡು ಬಸವ ಜಯಂತಿಯಂದು ಸಂಜೆ 7:30ರ ಸುಮಾರಿಗೆ ಗ್ರಾಮದತ್ತ ಬರುತ್ತಿದ್ದರು. ಇವರು ಬರುವುದನ್ನೇ ಕಾದು ಕುಳಿತಿದ್ದ ಸದಾಶಿವ ಪಡಸಲಗಿ ಹಾಗೂ ಸಹಚರರು, ಕಾರಿಗೆ ಅಡ್ಡಲಾಗಿ ನಿಂತು



ಗಲಾಟೆ ಮಾಡಿದ್ದಾರೆ. ಸೋಮಲಿಂಗಪ್ಪ ಕಾರಿನಿಂದ ಇಳಿದು ಬರುತ್ತಿದ್ದಂತೆ ಸದಾಶಿವ ಹಾಗೂ ಆತನ ಸಹಚರರು ಚಾಕುವಿನಿಂದ ಇರಿದಿದ್ದಾರೆ. ಹೊಟ್ಟೆ, ಎದೆ ಹಾಗೂ ಕುತ್ತಿಗೆಗೆ ಚಾಕುವಿನಿಂದ ಇರಿದ ಕಾರಣ ಸೋಮಲಿಂಗಪ್ಪ ಕಾರಿನ ಪಕ್ಕದಲ್ಲೇ ಕುಸಿದು ಬಿದ್ದು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಬಳಿಕ ಆರೋಪಿಗಳು ತಾವು ತಂದಿದ್ದ ಪೆಟ್ರೋಲ್ ಅನ್ನು ಹೊಸ ಕಾರು ಸಹಿತ ಸೋಮಲಿಂಗಪ್ಪನ ಮೇಲೆ ಸುರಿದು ಬೆಂಕಿ ಹಚ್ಚಿದ್ದಾರೆ. ಒಟ್ಟು 10 ಆರೋಪಿಗಳ ಹೆಸರನ್ನು ಉಲ್ಲೇಖಿಸಿ ಮೃತಪಟ್ಟ ಯುವಕನ ತಾಯಿ ಸಾವಳಗಿ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದಾರೆ. ಸದ್ಯಕ್ಕೆ ಐವರನ್ನು ಬಂಧಿಸಿದ್ದೇವೆ. ಉಳಿದ ಆರೋಪಿಗಳನ್ನು ವಿಚಾರಣೆ ನಡೆಸಲಾಗುತ್ತಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ದಾರ್ಥ ಗೋಯಲ್ ಮಾಹಿತಿ ನೀಡಿದ್ದಾರೆ.

ಆರೋಪಿಗಳಿಂದ ತಪ್ಪೊಪ್ಪಿಗೆ: ಸೋಮಲಿಂಗಪ್ಪ ತಾನು ಹೊಸ ಕಾರು ಖರೀದಿಸಿದ್ದರ ಬಗ್ಗೆ ವಾಟ್ಸಪ್ ಸ್ಟೇಟಸ್ ಹಾಕಿದ್ದರು.

ಇದನ್ನು ಗಮನಿಸಿದ ಆರೋಪಿಗಳು, ಈತನನ್ನು ಮುಗಿಸಲು ಸಂಚು ಹಾಕಿದ್ದರು. ಅದರಂತೆ ಸೋಮಲಿಂಗಪ್ಪ ಬರುವುದನ್ನು ಕಾದು ಕುಳಿತು ಕೃತ್ಯ ಎಸಗಿದ್ದಾರೆ. ವಿಚಾರಣೆ ವೇಳೆ ತಾವೇ ಕೃತ್ಯ ಎಸಗಿರುವುದಾಗಿ ಹಾಗೂ ತಾವೇ ತಂದಿದ್ದ ಪೆಟ್ರೋಲ್‌ನಿಂದ ಹೊಸ ಕಾರು ಸಹಿತ ಸೋಮಲಿಂಗಪ್ಪನನ್ನು ಸುಟ್ಟು ಹಾಕಿರುವುದಾಗಿಯೂ ತಪ್ಪೊಪ್ಪಿಕೊಂಡಿದ್ದಾರೆ ಎಂದು ಎಸ್‌ಪಿ ಸಿದ್ದಾರ್ಥ ಮಾಹಿತಿ ನೀಡಿದರು.

# ಬೆಂಗಳೂರಲ್ಲಿ ಕಂಪನಿಯ ಕ್ರೆಡಿಟ್ ಕಾರ್ಡ್ ಬಳಸಿ ₹27 ಲಕ್ಷ ದುರ್ಬಳಕೆ-ಉದ್ಯೋಗಿ ವಿರುದ್ಧ ಪ್ರಕರಣ

**ಬೆಂಗಳೂರು,ಏ.21**-ಅಧಿಕೃತ ಖರ್ಚು ಭರಿಸಲು ಕಂಪನಿಯು ನೀಡಿದ್ದ ಕ್ರೆಡಿಟ್ ಕಾರ್ಡ್ ಬಳಸಿಕೊಂಡು 27 ಲಕ್ಷ ರೂಪಾಯಿ ದುರ್ಬಳಕೆ ಮಾಡಿಕೊಂಡಿದಲ್ಲದೆ, ಪ್ರಶ್ನಿಸಿದ್ದಕ್ಕೆ ಚೀನಾ ಹಾಗೂ ಪಾಕಿಸ್ತಾನದ ಅನಾಮಧೇಯ ವ್ಯಕ್ತಿಗಳಿಂದ ಬೆದರಿಕೆಗೆ ಒಳಗಾಗಿದ್ದೆ ಎಂದು ಕೃತ್ಯವನ್ನು ಸಮರ್ಥಿಸಿಕೊಂಡಿದ್ದ ಉದ್ಯೋಗಿ ವಿರುದ್ಧ ವರ್ತೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸರ್ಜಾಪುರ ರಸ್ತೆಯಲ್ಲಿರುವ ಐಟಿ ಕಂಪನಿಯೊಂದರ ಪ್ರತಿನಿಧಿ ಅರ್ಜುನ್ ಶೆಟ್ಟಿ ನೀಡಿದ ದೂರಿನಡಿ ಒಡಿಶಾ ಮೂಲದ ಸೌಮ್ಯ ರಂಜನ್ ಪಾಂಡ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

2022 ರಿಂದ ಆರೋಪಿಯು ಕಂಪನಿಯಲ್ಲಿ ಸಿಸ್ಟಂ ಅಡ್ಮಿನಿಸ್ಟ್ರೇಟಿವ್ ಆಗಿ ಕೆಲಸ ಮಾಡುತ್ತಿದ್ದರು. ಅಧಿಕೃತ ವೆಚ್ಚಕ್ಕಾಗಿ ಕಂಪನಿಯು 2 ಲಕ್ಷ ಮಿತಿಯಿರುವ ಕ್ರೆಡಿಟ್ ಕಾರ್ಡ್ ನೀಡಿತ್ತು. ಅಗತ್ಯಕ್ಕೆ ಅನುಸಾರವಾಗಿ ಹಣದ ಮಿತಿಯನ್ನು ಹೆಚ್ಚಿಸಿಕೊಳ್ಳಬಹುದಾಗಿತ್ತ್.

ಈ ಅವಕಾಶ ಬಳಸಿಕೊಂಡು 2023ರ ಅಕ್ಟೋಬರ್‌ನಿಂದ 2024ರ ಜನವರಿವರೆಗೆ ಕಂಪನಿಗೆ ಸೇರಿದ 27 ಲಕ್ಷ ಹಣ ಬಳಸಿಕೊಂಡು ದುರ್ಬಳಕೆ ಮಾಡಿಕೊಂಡಿದ್ದಾರೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

ಹಣ ದುರ್ಬಳಕೆ ಸಂಬಂಧ ಉದ್ಯೋಗಿಯನ್ನು ಪ್ರಶ್ನಿಸಿದಾಗ ಚೀನಾ ಹಾಗೂ ಪಾಕ್ತಿಸಾನದ ಅನಾಮಧೇಯ ವ್ಯಕ್ತಿಗಳಿಂದ ತಾನು ಬೆದರಿಕೆಗೆ ಒಳಗಾಗಿದ್ದ್ ಎಂದು ಸಮರ್ಥಿಸಿಕೊಂಡಿದ್ದಾರೆ. ಹಂತ-ಹಂತವಾಗಿ ಹಣ ನೀಡುವುದಾಗಿ ಒಪ್ಪಿಕೊಂಡರೂ ಹಣ ನೀಡದೆ ಸತಾಯಿಸಿದ್ದ. ಕಂಪನಿಯ ಹಿರಿಯ ನಿರ್ವಹಣಾ ಸಿಬ್ಬಂದಿಗೆ ಇ-ಮೇಲ್ ಮೂಲಕ ಅಶ್ಲೀಲ ಚಿತ್ರಗಳನ್ನು ಕಳುಹಿಸಿದ್ದಾರೆ. ಹಣ ನೀಡುವ ಕುರಿತು ಒತ್ತಡ ಹೇರಿದರೆ ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಬೆದರಿಕೆ ಹಾಕಿದ್ದಾರೆ. ಕಂಪನಿಗೆ ₹27 ಲಕ್ಷ ವಂಚಿಸಿ, ಸಿಬ್ಬಂದಿಗೆ ಅಶ್ಲೀಲ ಚಿತ್ರ ಕಳುಹಿಸಿದ್ದ ಆರೋಪಿ ವಿರುದ್ಧ ಕ್ರಮ ಕೈಗೊಳ್ಳುವಂತೆ ನೀಡಿದ ದೂರಿನ ಮೇರೆಗೆ ಆರೋಪಿ ವಿರುದ್ಧ ಪ್ರಕರಣ ದಾಖಲಿಸಿ ತನಿಖೆ ಕೈಗೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.




ಕೆಐಎಡಿಬಿ ಹಣ ದುರ್ಬಳಕೆ ಪ್ರಕರಣ (ಬಳ್ಳಾರಿ) : ನಗರದಲ್ಲಿನ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ)ಯಲ್ಲಿ ನಡೆದಿದೆ ಎನ್ನಲಾದ ₹16.17 ಕೋಟಿ ದುರ್ಬಳಕೆ ಪ್ರಕರಣದಲ್ಲಿ ಬಂಧಿತನಾಗಿದ್ದ ಪ್ರಮುಖ ಆರೋಪಿ ಸಂತೋಷ್ ಕುಮಾರ್ ಪೊಲೀಸ್ ವಶದಲ್ಲಿದ್ದಾಗಲೇ ಪರಾರಿಯಾಗಿ, 24 ಗಂಟೆಯೊಳಗೆ ಮತ್ತೆ ಪೊಲೀಸರ ಬಲೆಗೆ ಬಿದ್ದಿದ್ದಾನೆ ಎಂದು ಪೊಲೀಸರು ಹೇಳಿದ್ದರು.

ಗುತ್ತಿಗೆ ನೌಕರನಾಗಿದ್ದ ಸಂತೋಷ್ ಕುಮಾರ್ ಅವರು 2024ರ ಅಕ್ಟೋಬರ್‌ನಿಂದ 2025ರ ಡಿಸೆಂಬರ್ ಅವಧಿಯಲ್ಲಿ ನಕಲಿ ಸಹಿ ಮತ್ತು ಮೊಹರು ಬಳಸಿ ಇಲಾಖೆಯ ಚೆಕ್‌ಗಳ ಮೂಲಕ ಕೋಟ್ಯಂತರ ಹಣವನ್ನು ದುರ್ಬಳಕೆ ಮಾಡಿಕೊಂಡಿದ್ದಾರೆ ಎಂಬ ಆರೋಪ ಕೇಳಿಬಂದಿತ್ತು. ಈ ಸಂಬಂಧ ಮಾರ್ಚ್ 20ರಂದು ಎಪಿಎಂಸಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

# ಇನ್‌ಸ್ಪೆಕ್ಟರ್‌ಗೆ ಕಿರುಕುಳ ಆರೋಪ : ವರದಿ ನೀಡಲು ಗೃಹ ಸಚಿವ ಸೂಚನೆ

**ಬೆಂಗಳೂರು,ಏ.21**-ಡಿಸಿಆರ್‌ಇ ಇನ್‌ಸ್ಪೆಕ್ಟರ್‌ಗೆ ಮೇಲಧಿಕಾರಿಗಳ ಕಿರುಕುಳ ಆರೋಪ ಮತ್ತು ಮಂಗಳೂರು ನಗರ ಪೊಲೀಸ್ ಕಮಿಷನರ್ ವಿರುದ್ಧ ಡಿಜಿಪಿಗೆ ಎಸ್‌ಪಿ ಪತ್ರ ಬರೆದಿರುವ ಕುರಿತು ವರದಿ ನೀಡುವಂತೆ ಸೂಚನೆ ನೀಡಿದ್ದೇನೆ ಎಂದು ಗೃಹ ಸಚಿವ ಪರಮೇಶ್ವರ್ ಹೇಳಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮಾಧ್ಯಮಗಳಲ್ಲಿ ವರದಿ ಅಗಿರುವುದನ್ನು ಗಮನಿಸಿದ್ದೇನೆ. ಡಿಸಿಆರ್‌ಇ ಇನ್‌ಸ್ಪೆಕ್ಟರ್ ಶ್ರೀನಿವಾಸ್ ಎಂಬುವರು ಸಾಕಷ್ಟು ಆರೋಪಗಳನ್ನು ಮಾಡಿದ್ದಾರೆ. ಈ ಸಂಬಂಧ ಎಸ್‌ಪಿ ಕಾಶಿನಾಥ್ ಪತ್ರ ಬರೆದಿದ್ದಾರೆ ಎಂದರು.

ಈ ಎರಡು ಪ್ರಕರಣಗಳ ಕುರಿತು ಡಿಜಿಪಿಯವರನ್ನು ವರದಿ ಕೇಳಿದ್ದೇನೆ. ವರದಿ ಬಳಿಕ ಸತ್ಯಾಸತ್ಯತೆಯನ್ನು ಆಧರಿಸಿ ಕ್ರಮ ತೆಗೆದುಕೊಳ್ಳಲಾಗುವುದು ಎಂದು ತಿಳಿಸಿದರು.

ಶಾಸಕ ಹ್ಯಾರಿಸ್ ಮನೆ ಮೇಲೆ ಇಡಿ ದಾಳಿ: ಇನ್ನೂ ಜಾರಿ ನಿರ್ದೇಶನಾಲಯದ ಅಧಿಕಾರಿಗಳು ಶಾಸಕರಾದ ಎನ್.ಎ.ಹ್ಯಾರೀಸ್ ಅವರ ಮಕ್ಕಳ ನಿವಾಸಗಳ ಮೇಲೆ ದಾಳಿ ಕುರಿತು ಪ್ರತಿಕ್ರಿಯಿಸಿದ ಸಚಿವರು, ಯಾವ ವಿಚಾರಕ್ಕೆ ದಾಳಿ ನಡೆಸಿದ್ದಾರೆ, ಏನೆಲ್ಲ ಸಿಕ್ಕಿದ್ ಎಂಬುದನ್ನು ಇಡಿ ಅಧಿಕಾರಿಗಳು ಮಾಹಿತಿ ನೀಡಬೇಕು. ಸಾಮಾನ್ಯವಾಗಿ ಪತ್ರಿಕಾ ಹೇಳಿಕೆ ಬಿಡುಗಡೆ ಮಾಡುತ್ತಾರೆ. ಅಲ್ಲಿಯವರೆಗೂ ಕಾಯಬೇಕು. ಇದರ ನಡುವೆ ನಾವು ಹೇಳಿಕೆಗಳನ್ನು ಕೊಟ್ಟರೆ ಅಪ್ರಸ್ತುತ ಆಗುತ್ತದೆ ಎಂದರು.

ಬಿಟ್‌ಕಾಯಿನ್ ಹಗರಣ ಕುರಿತಂತೆ ರಾಜ್ಯದಲ್ಲಿ ಎಸ್‌ಐಟಿ ರಚನೆ ಮಾಡಲಾಗಿತ್ತು. ತನಿಖೆ ಕೊನೆ ಹಂತದಲ್ಲಿದೆ.



ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ವ್ಯಾಪ್ತಿ ಹೊಂದಿದೆ. ಅನೇಕ ವಿಚಾರ ಗಳಲ್ಲಿ ಮಾಹಿತಿಯನ್ನು ಕಲೆ ಹಾಕಿ ಅಂತಿಮ ವರದಿ ಕೊಡಬೇಕು. ಅಂತಿಮ ಹಂತದಲ್ಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಗತ್ಯ ಮಾಹಿತಿ ಸಿಗುವವರೆಗೂ ತನಿಖೆ ನಡೆಸುತ್ತಾರೆ. ಟೆಕ್ನಿಕಲ್ ಆಗಿರುವುದರಿಂದ ಮಾಹಿತಿಗಳನ್ನು ಕಲೆ ಹಾಕುವುದರಲ್ಲಿ ವಿಳಂಬ ಅಗಿದೆ ಎಂದು ಅನ್ನಿಸುತ್ತದೆ. ಶೀಘ್ರವಾಗಿ ಪೂರ್ಣಗೊಳಿಸಿ, ಮಧ್ಯಂತರ ಚಾರ್ಜ್‌ಶೀಟ್ ಸಲ್ಲಿಸಲು ಈಗಾಗಲೇ ಸೂಚನೆ ನೀಡಲಾಗಿದೆ ಎಂದು ಹೇಳಿದರು.ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಇಡಿಯವರು ಪೊಲೀಸ್ ಇಲಾಖೆಯಿಂದ ಮಾಹಿತಿ ತೆಗೆದುಕೊಂಡಿದ್ರೆ, ನಾನೇನು ಹೇಳಲು ಆಗಲ್ಲ. ಅವರಿಗೆ ಮಾಹಿತಿ ತೆಗೆದುಕೊಳ್ಳಲು ಅಧಿಕಾರ ಇದೆ. ಇದೇ ವಿಚಾರದಲ್ಲಿ ಮಾಹಿತಿ ತೆಗೆದುಕೊಂಡಿರಬಹುದು. ಈ ವಿಚಾರ ಅಲ್ಲ, ಬೇರೆ ವಿಚಾರ ಇದ್ರೂ, ಇಡಿಯವರೇ ಹೇಳಬೇಕಾಗುತ್ತದೆ ಎಂದರು.

ಹ್ಯಾಕರ್ ಶ್ರೀಕಿ ಜೊತೆಗೆ ಪ್ರಭಾವಿಗಳು ಸಂಪರ್ಕ ಹೊಂದಿರುವ ಕುರಿತು ಮಾಧ್ಯಮದವರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಸಚಿವರು, ಈ ವಿಚಾರದಲ್ಲಿ ತನಿಖೆಯಾದ್ರೆ ಎಲ್ಲವೂ ಹೊರಗೆ ಬರುತ್ತದೆ. ಯಾರೆಲ್ಲ ಸಂಪರ್ಕದಲ್ಲಿದ್ದರೂ, ಅವರ ಪಾತ್ರ ಏನು ಅನ್ನುವುದೆಲ್ಲ್ ಗೊತ್ತಾಗುತ್ತದೆ. ನಾವು ಮಾತಾಡುವುದಕ್ಕು, ತನಿಖೆಯಲ್ಲಿ ಗೊತ್ತಾಗುವ ವಿಚಾರಗಳು ಬೇರೆ ಬೇರೆ ಇರುತ್ತದೆ. ಅನೇಕ ಸಂದರ್ಭಗಳಲ್ಲಿ ನಾವು ರಾಜಕೀಯವಾಗಿ ಏನೇನೋ ಮಾತಾಡಿರುತ್ತೇವೆ, ಅದು ತನಿಖೆಯಲ್ಲಿ ಹೊರಬರಬೇಕಲ್ಲವೇ ಎಂದರು. ಮುಸ್ಲಿಂ ನಾಯಕರು ಪಕ್ಷದ ವರಿಷ್ಟರಿಗೆ ಪತ್ರ ಬರೆದಿರುವ ಕುರಿತು ಪ್ರತಿಕ್ರಿಯಿಸಿದ ಸಚಿವರು ಸತ್ಯಾಸತ್ಯತೆಯನ್ನು ಪರಿಶೀಲನೆ ಮಾಡುತ್ತಾರೆ. ಈ ಬಗ್ಗೆ ರಾಹುಲ್ ಗಾಂಧಿ ಅವರು ಸೂಚನೆ ನೀಡುತ್ತಾರೆ. ನಾವು ಯಾವತ್ತು ಕೂಡ ಚುನಾವಣೆಗಳಲ್ಲಿ ಸ್ಪರ್ಧಿಸಲು ಮುಸ್ಲಿಂ ಸಮುದಾಯದವರಿಗೆ ಪ್ರಾಧಾನ್ಯತೆ ನೀಡಲಾಗಿದೆ ಎಂದು ತಿಳಿಸಿದರು. ಅಹಿಂದ ಸರ್ಕಾರದ ಅಡಿಯಲ್ಲಿ ದಲಿತ ಅಧಿಕಾರಿಗಳಿಗೆ ರಕ್ಷಣೆಯಿಲ್ಲ: SP, ಡಿವೈಎಸ್ಪಿ ವಿರುದ್ಧ ಈCRE ಇನ್ಸ್‌ಪೆಕ್ಟರ್ ದೂರು ದಾಖಲು ಸಾಮಾನ್ಯವಾಗಿ ಕಾಂಗ್ರೆಸ್ ಪಕ್ಷದಲ್ಲಿ ಮೃತಪಟ್ಟ ಕುಟುಂಬದವರಿಗೆ ಟಿಕೆಟ್ ನೀಡುವ ಪದ್ಧತಿ ಇದೆ. ಇದನ್ನು ಬೇರೆ ರೀತಿ ಅರ್ಥೈಸಿಕೊಳ್ಳಲಾಗಿದೆ. ಮತದಾರರು ಜಾಸ್ತಿ ಇದ್ದೇವೆ ಎಂದು ಟಿಕೆಟ್ ಕೇಳಿದ್ದಾರೆ. ಅದು ಕೂಡ ತಪ್ಪಲ್ಲ. ಕಾರಣಾಂತರಗಳಿಂದ ಶಿವಶಂಕರಪ್ಪ ಅವರ ಮನೆಯವರಿಗೆ ಟಿಕೆಟ್ ಕೊಟ್ಟಿರುವುದನ್ನು ಬೇರೆ ರೀತಿ ಅರ್ಥೈಸಿಕೊಳ್ಳುವುದು ಸರಿಯಲ್ಲ. ಇದು ಕಾಂಗ್ರೆಸ್ ಪಕ್ಷದ ಆಂತರಿಕ ವಿಚಾರ. ಪಕ್ಷದ್ ಅಧ್ಯಕ್ಷರು, ಮುಖ್ಯಮಂತ್ರಿಗಳು ಸೇರಿದಂತೆ ನಾವೆಲ್ಲ ಸರಿಪಡಿಸುತ್ತೇವೆ ಎಂದು ಹೇಳಿದರು.

## ಹಿಂದಿ ಗೊಂದಲ: ಎಸ್‌ಎಸ್‌ಎಲ್‌ಸಿ ಫಲಿತಾಂಶ ವಿಳಂಬ, ಸಚಿವ ಮಧು ಬಂಗಾರಪ್ಪ

**ಬೆಂಗಳೂರು, (ಏಪ್ರಿಲ್ 21),ಏ.21**-ಎಸ್‌ಎಸ್‌ಎಲ್‌ಸಿ ಹಿಂದಿ ವಿಷಯಕ್ಕೆ ಗ್ರೇಡ್ ಬದಲಿಗೆ ಅಂಕ ನೀಡುವಂತೆ ಆದೇಶ ಸಂಬಂಧ ರಾಜ್ಯ ಸರ್ಕಾರದ ಮರುಪರಿಶೀಲನಾ ಅರ್ಜಿಯನ್ನು ಹೈಕೋರ್ಟ್ ಇತ್ಯರ್ಥಪಡಿಸಿದೆ. 2025-26ರಿಂದ ಹಿಂದಿ ವಿಷಯಕ್ಕೆ ಅಂಕ ನೀಡಬೇಕೆಂದು ಪೀಠ ಸ್ಪಷ್ಟಪಡಿಸಿದ್ದು, ನೀವು ಎಲ್ಲರನ್ನೂ ಪಾಸ್ ಮಾಡಬೇಕೆಂದಿದ್ದರೆ ಪರೀಕ್ಷೆಯನ್ನೇ ರದ್ದು ಮಾಡಿ. ನಿಯಮ ರೂಪಿಸುವ ಮುನ್ನ ಪರೀಕ್ಷಾ ಪದ್ಧತಿ ಬದಲಾವಣೆ ಸೂಕ್ತವಲ್ಲ ಎಂದು ತಿಳಿಸಿದೆ. ಇನ್ನು ಈ ಹೈಕೋರ್ಟ್ ಆದೇಶದ ಬಗ್ಗೆ ಸಿಎಂ ಜತೆ ಮಾತನಾಡುವುದಾಗಿ ಸಚಿವ ಮಧುಬಂಗಾರಪ್ಪ ಹೇಳಿದ್ದಾರೆ. ಹೀಗಾಗಿ ಎಸ್‌ಎಸ್‌ಎಲ್‌ಸಿ ಫಲಿತಾಂಶ ಇನ್ನಷ್ಟು ವಿಳಂಬವಾಗುವ ಸಾಧ್ಯತೆಗಳಿವೆ. ಶಿಕ್ಷಣ ಸಚಿವ ಮಧುಬಂಗಾರಪ್ಪ ಪ್ರತಿಕ್ರಿಯಿಸಿದ್ದು, ಈ ಮೊದಲು ಹೈಕೋರ್ಟ್ ನಮ್ಮ ಪರವಾಗಿ ಹೇಳಿತ್ತು. ಯಾರು ಅರ್ಜಿ ಹಾಕಿದ್ದರು ಅವರಿಗೆ ದಂಡ ಹಾಕಿತ್ತು. ಈಗ ಯಾರೋ ಅರ್ಜಿ ಸಲ್ಲಿಸಿದ್ದು, ಅದರನ್ವಯ ಈ ವರ್ಷ ಬೇಡ, ಮುಂದಿನ ವರ್ಷ ನೀವು ಮಾಡಿ ಎಂದು ಆದೇಶ ನೀಡಿದೆ. ಈ ವರ್ಷ ಅಂಕ ನೀಡಿ ಎಂದಿದ್ದಾರೆ. ಆದ್ರೆ, ನಾನು ಇನ್ನೂ ಆರ್ಡರ್ ನೋಡಿಲ್ಲ. ನನಗೆ ಎಜಿ ಮತ್ತು ಡಿಪಾರ್ಟ್ಮೆಂಟ್ ಅವರು ಹೇಳಿದ್ದರು. ನಾನು ಈ ಮಾಹಿತಿ ಯನ್ನ ಸಿಎಂ ಅವರಿಗೆ ಹೇಳಿದ್ದೇನೆ. ಅವರು ಈಗ ಮೈಸೂರಲ್ಲಿದ್ದಾರೆ, ಇಂದು (ಏಪ್ರಿಲ್ 21) ಸಂಜೆ ಬರ್ತಾರೆ. ನಾಳೆ (ಏಪ್ರಿಲ್ 22) ಅವರ ಬಳಿ ಮಾತಾಡಿ ಮುಂದೆ ಏನು ಮಾಡಬೇಕು ಎಂದು ಚರ್ಚೆ ನಡೆಸುತ್ತೇವೆ ಎಂದು ಸ್ಪಷ್ಟಪಡಿಸಿದರು.

## ನಮ್ಮ ಯಾವುದೇ ನಿಯೋಗ ಪಾಕ್‌ಗೆ ಭೇಟಿ ನೀಡಿಲ್ಲ ಇಸ್ಲಾಮಾಬಾದ್‌ಗೆ ತೆರಳಲು ಸಿದ್ಧವಾದ ಟ್ರಂಪ್‌ಗೆ ಇರಾನ್ ಶಾಕ್...!

ಎರಡು ವಾರಗಳ ಕದನ ವಿರಾಮ ನಾಳೆಗೆ ಮುಕ್ತಾಯಗೊಳ್ಳಲಿದ್ದು, ಅಮೆರಿಕ ಜೊತೆಗಿನ ಎರಡನೇ ಸುತ್ತಿನ ಸಂಭವನೀಯ ಶಾಂತಿ ಮಾತುಕತೆಗೂ ಮುನ್ನ ಸಾಕಷ್ಟು ಊಹಾಪೋಹಗಳು ಕೇಳಿಬರುತ್ತಿದ್ದು, ಇರಾನ್‌ನ ಸರ್ಕಾರಿ ಸ್ವಾಮ್ಯದ ದೂರದರ್ಶನ ಮಂಗಳವಾರ ಟಿಇರಾನ್‌ನಿಂದ ಯಾವುದೇ ನಿಯೋಗ ಇಲ್ಲಿಯವರೆಗೆ ಪಾಕಿಸ್ತಾನದ ಇಸ್ಲಾಮಾಬಾದ್‌ಗೆ ಭೇಟಿ ನೀಡಿಲ್ಲಟಿ ಎಂದಿದೆ. ಇಲ್ಲಿಯವರೆಗೆ, ಇರಾನ್‌ನಿಂದ ಯಾವುದೇ ನಿಯೋಗ ಪಾಕಿಸ್ತಾನಕ್ಕೆ ತೆರಳಿಲ್ಲ. ಹಾಗಾಗಿ ಇರಾನ್ ಈಗಾಗಲೇ ಸಂಧಾನಕಾರರನ್ನು ಕಳುಹಿಸಿದೆ ಎಂಬ ವರದಿಗಳು ಸುಳ್ಳುಟಿ ಎಂದು ಇರಾನ್ ದೂರದರ್ಶನ ಹೇಳಿದೆ. ವಾರಾಂತ್ಯದಲ್ಲಿ ಅಮೆರಿಕ ನೌಕಾಪಡೆಯು ಇರಾನ್‌ನ ಹಡಗನ್ನು ವಶಪಡಿಸಿಕೊಂಡಿರುವುದಕ್ಕೆ ಪ್ರತಿಕ್ರಿಯಿಸಲು ಎದುರು ನೋಡುತ್ತಿರುವಾಗ, ಅಮೆರಿಕದೊಂದಿಗಿನ ಶಾಂತಿ ಮಾತುಕತೆಗೆ ಗೈರಾಗುವ ಕುರಿತು ಸೂಚನೆಗಳು ಲಭ್ಯವಾಗಿವೆ.

ಇರಾನ್‌ನ ರಾಜ್ಯ ದೂರದರ್ಶನ ಸ್ವತಂತ್ರ ಅಥವಾ ತಟಸ್ಥವಾಗಿಲ್ಲ. ಬದಲಾಗಿ, ಇರಾನ್‌ನ ಆಡಳಿತ ವ್ಯವಸ್ಥೆಯಲ್ಲಿ ಹೆಚ್ಚು ಸಂಪ್ರದಾಯವಾದಿ ಮತ್ತು ಕಟ್ಟುನಿಟ್ಟಾದ ರಾಜಕೀಯ-ಧಾರ್ಮಿಕ ಬಣವಾದ ಕಠಿಣವಾದಿಗಳಿಂದ ದೀರ್ಘಕಾಲದಿಂದ ನಿಯಂತ್ರಿಸಲ್ಪಟ್ಟಿದೆ. ಮಾತುಕತೆಗಾಗಿ ನಿಯೋಗ ಇಸ್ಲಾಮಾಬಾದ್‌ಗೆ ಹೋಗಲಿದೆ ಎಂದು ಯಾವುದೇ ಸರ್ಕಾರಿ ಅಧಿಕಾರಿ ಖಚಿತಪಡಿಸಿಲ್ಲ. ಆದರೆ, ಅದೇ ಸಮಯದಲ್ಲಿ ಮಾತುಕತೆಗಳು ಸಂಭವಿಸಿದಲ್ಲಿ ಅಧಿಕಾರಿಗಳು ಈಗಾಗಲೇ ಸಿದ್ಧರಾಗಿದ್ದಾರೆ. ಯುಎಸ್ ಉಪಾಧ್ಯಕ್ಷ ಜೆಡಿ ವ್ಯಾನ್ಸ್ ಅಮೆರಿಕದ ತಂಡವನ್ನು ಮಾತುಕತೆಗೆ ಮುನ್ನಡೆಸುವ ನಿರೀಕ್ಷೆಯಿದೆ. ತನ್ನ ನಿಯೋಗವನ್ನು ಯಾರು ಮುನ್ನಡೆಸಬಹುದು ಎಂಬುದರ ಕುರಿತು ಇರಾನ್ ಸದ್ಯಕ್ಕೆ ಯಾವುದೇ ಮಾಹಿತಿ ನೀಡಿಲ್ಲ. ಕಳೆದ ಬಾರಿ, ಸಂಸದೀಯ ಸ್ಪೀಕರ್ ಮೊಹಮ್ಮದ್ ಬಾಗರ್ ಖಲಿಬಾಫ್ ಇರಾನ್ ನಿಯೋಗವನ್ನು ಮುನ್ನಡೆಸಿದ್ದರು. ಫೆಬ್ರುವರಿ 28 ರಂದು ಅಮೆರಿಕ ಮತ್ತು ಇಸ್ರೇಲ್ ಜಂಟಿಯಾಗಿ ಇರಾನ್ ಮೇಲೆ ದಾಳಿ ನಡೆಸಿದ ಬಳಿಕ ಪಶ್ಚಿಮ ಏಷ್ಯಾದಲ್ಲಿ ಯುದ್ಧ ಪ್ರಾರಂಭವಾಯಿತು. ಇದಾದ ಸ್ವಲ್ಪ ಸಮಯದ ನಂತರ ಇರಾನ್, ಪರ್ಷಿಯನ್ ಕೊಲ್ಲಿಯನ್ನು ಇತರ ಸಮುದ್ರಗಳಿಗೆ ಸಂಪರ್ಕಿಸುವ ಹಾರ್ಮುಜ್ ಜಲಸಂಧಿಯಲ್ಲಿ ಸಂಚಾರವನ್ನು ನಿರ್ಬಂಧಿಸಿದೆ. ಟೆಹ್ರಾನ್‌ನ ಈ ಕ್ರಿಯೆಗೆ ಪ್ರತಿಕ್ರಿಯೆಯಾಗಿ ಯುಎಸ್ ಇರಾನ್‌ನ ಬಂದರುಗಳ ಮೇಲೆ ದಿಗ್ಬಂಧನ ವಿಧಿಸಿದೆ.

# ಒಂದೇ ಬ್ಯಾಂಕ್ ಖಾತೆಯಲ್ಲಿ ₹296 ಕೋಟಿ ಹಣ! ನೂರಾರು ಜನರಿಗೆ ವಂಚಿಸಿ ಜಮೆ

**ಹೈದರಾಬಾದ್(ತೆಲಂಗಾಣ),ಏ.21**-ಒಂದೇ ಬ್ಯಾಂಕ್ ಖಾತೆಯಲ್ಲಿ 296.96 ಕೋಟಿ ಹಣ! ಹೌದು, ಸೈಬರ್ ವಂಚಕರು ಕಳೆದ ಕೆಲವು ವರ್ಷಗಳಿಂದ ಹತ್ತಾರು ಜನರ ಬ್ಯಾಂಕ್ ಖಾತೆಗಳಿಂದ ದೋಚಿ ಒಂದೇ ಬ್ಯಾಂಕ್ ಖಾತೆಗೆ ಜಮೆ ಮಾಡಿರುವ ಹಣವಿದು. ಇದನ್ನು ಹೈದರಾಬಾದ್‌ನ ಸೈಬರಾಬಾದ್ ಸೈಬರ್ ಕ್ರೈಂ ಪೊಲೀಸರು ಪತ್ತೆ ಹಚ್ಚಿದ್ದಾರೆ.

ಆಪರೇಷನ್ ಕ್ಯಾಕ್‌ಡೌನ್ 2.0ಟಿನ ಭಾಗವಾಗಿ ಪೊಲೀಸರು ಸೈಬರ್ ಅಪರಾಧ ಪ್ರಕರಣಗಳಲ್ಲಿ ಗುರುತಿಸಲಾದ ಮ್ಯೂಲ್ ಬ್ಯಾಂಕ್ ಖಾತೆಗಳ ದತ್ತಾಂಶವನ್ನು ಪರಿಶೀಲಿಸುವಾಗ ಆಘಾತಕಾರಿ ವಂಚನೆ ಬಯಲಾಗಿದೆ.

ನೂರಾರು ಮಂದಿಯನ್ನು ವಂಚಿಸಿರುವ ಮೋಸಗಾರರು, ಕೊಂಡಾಪುರದ ವೇಣುಗೋಪಾಲ್ ಇನ್ವೆಸ್ಟ್‌ಮೆಂಟ್ ಹೆಸರಿನಲ್ಲಿ ಬ್ಯಾಂಕ್ ಖಾತೆ ತೆರೆದು 296.96 ಕೋಟಿ ರೂ ಮೊತ್ತದ ವಹಿವಾಟು ನಡೆಸಿದ್ದಾರೆ. 2022 ಅಕ್ಟೋಬರ್ 13ರಂದು ಅವರ ಹೆಸರಿನಲ್ಲಿ ಖಾತೆ ತೆರೆಯಲಾಗಿದ್ದು, 2025ರ ಆಗಸ್ಟ್ ವೇಳೆಗೆ ಖಾತೆಯಲ್ಲಿ ವಹಿವಾಟು ಸ್ಥಗಿತಗೊಂಡಿರುವುದನ್ನು ಪೊಲೀಸರು ಗುರುತಿಸಿದ್ದಾರೆ.

ಈ ಖಾತೆಗೆ ಸಂಬಂಧಿಸಿದಂತೆ ರಾಷ್ಟ್ರೀಯ ಸೈಬರ್ ಅಪರಾಧ ವರದಿ ಮಾಡುವ ಪೋರ್ಟಲ್‌ಗೆ ಬಂದ 21 ದೂರುಗಳನ್ನು ವಿಶ್ಲೇಷಿಸಿದಾಗ ಬೃಹತ್ ವಹಿವಾಟಿನ ವಿವರಗಳು ಬೆಳಕಿಗೆ ಬಂದಿವೆ. ಆರೋಪಿ ವೇಣುಗೋಪಾಲ್ ಈ ವಹಿವಾಟುಗಳನ್ನು ಸುಗಮಗೊಳಿಸಲು ಸೈಬರ್ ಅಪರಾಧಿಗಳೊಂದಿಗೆ ಶಾಮೀಲಾಗಿದ್ದ ಎಂದು ಪೊಲೀಸರಿಗೆ ತಿಳಿದುಬಂದಿದೆ.




ದೇಶಾದ್ಯಂತ 38 ಪ್ರಕರಣಗಳು ದಾಖಲಾಗಿದ್ದು, ಸುಮಾರು 310 ಕೋಟಿ ರೂ.ಗೂ ಹೆಚ್ಚಿನ ವಂಚನೆಯ ವಹಿವಾಟುಗಳನ್ನು ಪೊಲೀಸರು ಕಂಡು ಹಿಡಿದಿದ್ದಾರೆ ಮತ್ತು 17 ಮಂದಿ ವಿರುದ್ಧ ಪ್ರಕರಣಗಳನ್ನು ದಾಖಲಿಸಿದ್ದಾರೆ.

ಸೈಬರ್ ಅಪರಾಧಿಗಳನ್ನು ಮಟ್ಟ ಹಾಕಲು ತೆಲಂಗಾಣ ಸೈಬರ್ ಭದ್ರತಾ ಬ್ಯೂರೋ ಟಿಆಪರೇಷನ್ ಕ್ಯಾಕ್‌ಡೌನ್‌ಟಿ ಪ್ರಾರಂಭಿಸಿತ್ತು. ಟಿಮ್ಯೂಲ್ ಖಾತೆಗಳಟಿ ಬಗ್ಗೆ ಡೇಟಾವನ್ನು ಸಂಗ್ರಹಿಸುವ ಮೂಲಕ ಮತ್ತು ಅವರಿಗೆ ಹಣ ವರ್ಗಾವಣೆ ಮಾಡುವ ಮೂಲಗಳನ್ನು ಪತ್ತೆ ಹಚ್ಚುವ ಮೂಲಕ ಅಪರಾಧಿಗಳನ್ನು ಗುರುತಿಸುವುದು ಮತ್ತು ಬಂಧಿಸುವುದು ಇದರ ಪ್ರಾಥಮಿಕ ಉದ್ದೇಶ.

ರಾಷ್ಟ್ರೀಯ ಸೈಬರ್ ಅಪರಾಧ ವರದಿ ಮಾಡುವ ಪೋರ್ಟಲ್ ಮೂಲಕ ಸ್ವೀಕರಿಸಿದ ದೂರುಗಳಿಂದ ಪೊಲೀಸ್ ಅಧಿಕಾರಿಗಳು, ಅಪರಾಧಿಗಳ ಬ್ಯಾಂಕ್ ಖಾತೆ ವಿವರಗಳನ್ನು ಸಂಗ್ರಹಿಸುತ್ತಿದ್ದಾರೆ ಮತ್ತು ತೆಲಂಗಾಣದಾದ್ಯಂತ ವಿವಿಧ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿರುವ ಪ್ರಕರಣಗಳಲ್ಲಿ ಭಾಗಿಯಾಗಿರುವ ಬ್ಯಾಂಕ್ ಖಾತೆಗಳೊಂದಿಗೆ ಅವುಗಳನ್ನು ಕ್ರಾಸ್-ರೆಫರೆನ್ಸ್ ಮಾಡುತ್ತಿದ್ದಾರೆ.

ಇದರ ಭಾಗವಾಗಿ ಸೈಬರಾಬಾದ್ ಪೊಲೀಸರು ಮಾಧಾಪುರ, ಗಚಿಬೌಲಿ ಮತ್ತು ನರಸಿಂಗಿ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿರುವ 38 ಸೈಬರ್ ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗಿರುವ ಟಿಮ್ಯೂಲ್ ಖಾತೆಟಿಗಳನ್ನು ಗುರುತಿಸಿ ಅವುಗಳ ವಿವರ ಸಂಗ್ರಹಿಸಿದ್ದಾರೆ. ಸೈಬರ್ ಅಪರಾಧಗಳಲ್ಲಿ ಹಣ ವರ್ಗಾವಣೆಗೆ ಅನುಕೂಲವಾಗುವಂತೆ ಈ ಖಾತೆಗಳನ್ನು ಎರಡು ಅಥವಾ ಮೂರು ವಿಭಿನ್ನ ರೀತಿಯಲ್ಲಿ ಬಳಸಲಾಗುತ್ತಿದೆ ಎಂದು ತನಿಖೆಯಿಂದ ತಿಳಿದುಬಂದಿದೆ.

ಸೈಬರಾಬಾದ್ ಆಯುಕ್ತ ಡಾ.ರಮೇಶ್ ಅವರ ನಿರ್ದೇಶನದ ಮೇರೆಗೆ 38 ಪ್ರಕರಣಗಳ ತನಿಖೆಯನ್ನು ಸೈಬರ್ ಅಪರಾಧ ವಿಭಾಗಕ್ಕೆ ವರ್ಗಾಯಿಸಲಾಗಿದೆ. ಈ ದೊಡ್ಡ ಪ್ರಮಾಣದ ವಹಿವಾಟುಗಳನ್ನು ಪತ್ತೆಹಚ್ಚಲು ಕೆಲವು ಬ್ಯಾಂಕುಗಳು ವಿಫಲವಾಗಿರುವುದರಿಂದ ಬ್ಯಾಂಕ್ ಸಿಬ್ಬಂದಿಯೂ ಶಾಮೀಲಾಗಿರಬಹುದು ಎಂದು ಪೊಲೀಸರು ಶಂಕಿಸಿದ್ದಾರೆ.

## ಕೋರ್ಟ್ ಆದೇಶ ಸಿಕ್ಕಿದ ನಂತರ ಶಾಸಕ ವಿನಯ್ ಕುಲಕರ್ಣಿ ಭವಿಷ್ಯ ನಿರ್ಧಾರ: ಖಾದರ್



**ಮಂಗಳೂರು,ಏ.21**-ಧಾರವಾಡ ಕಾಂಗ್ರೆಸ್ ಶಾಸಕ ವಿನಯ್ ಕುಲಕರ್ಣಿ ಅವರ ಶಿಕ್ಷೆಗೆ ಸಂಬಂಧಿಸಿದ ಅಧಿಕೃತ ನ್ಯಾಯಾಲಯದ ಆದೇಶವನ್ನು ಪಡೆದ ನಂತರವೇ ಅವರು ಶಾಸಕರಾಗಿ ಮುಂದುವರಿಯುವ ವಿಚಾರದಲ್ಲಿ ನಿರ್ಧಾರ ಕೈಗೊಳ್ಳಲಾಗುತ್ತದೆ ಎಂದು ವಿಧಾನಸಭಾಧ್ಯಕ್ಷ ಯುಟಿ ಖಾದರ್ ತಿಳಿಸಿದ್ದಾರೆ. ಅವರು ಮೇಲ್ಮನವಿ ನ್ಯಾಯಾಲಯದಲ್ಲಿ ತೀರ್ಪಿಗೆ ವಿರುದ್ಧವಾಗಿ ಅರ್ಜಿ ಸಲ್ಲಿಸುವ ಅವಕಾಶವೂ ಇದೆ ಎಂದು ಹೇಳಿದರು.

ಮೇಲ್ಮನವಿ ನ್ಯಾಯಾಲಯ ಜೀವಾವಧಿ ಶಿಕ್ಷೆಗೆ ತಾತ್ಕಾಲಿಕ ತಡೆ ನೀಡಿದರೆ, ವಿನಯ್ ಕುಲಕರ್ಣಿ ಅವರು ಶಾಸಕರಾಗಿ ಮುಂದುವರಿಯಬಹುದು. ಇತ್ತೀಚೆಗೆ ಯೋಗೇಶ್ ಗೌಡರ್ ಹತ್ಯೆ ಪ್ರಕರಣದಲ್ಲಿ ಕಾಂಗ್ರೆಸ್ ಶಾಸಕ ವಿನಯ್ ಕುಲಕರ್ಣಿಗೆ ಜೀವಾವಧಿ ಶಿಕ್ಷೆ ವಿಧಿಸಲಾಗಿತ್ತು.

ಕ್ಷೇತ್ರಗಳ ಪುನರ್‌ವಿಭಜನೆಗೆ ಸಂಬಂಧಿಸಿದ ಸಂವಿಧಾನ (131ನೇ ತಿದ್ದುಪಡಿ) ಮಸೂದೆ, 2026, ಲೋಕಸಭಾ ಕ್ಷೇತ್ರಗಳ ಪುನರ್‌ವಿಭಜನೆಗೆ ಕೇಂದ್ರ ಸರ್ಕಾರ ಯಾವ ಆಧಾರದ ಮೇಲೆ ಮುಂದಾಗಿದೆ ಎಂಬ ಮಾಹಿತಿ ತಮ್ಮ ಬಳಿ ಇಲ್ಲ ಎಂದರು. ಕಾನೂನುಗಳನ್ನು ರೂಪಿಸುವಾಗ ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವುದು ಮತ್ತು ಯಾವುದೇ ವರ್ಗಕ್ಕೂ ಅನ್ಯಾಯವಾಗದಂತೆ ನೋಡಿಕೊಳ್ಳುವುದು ಮಹತ್ವದ ವಿಷಯ ಎಂದರು. ರಾಜ್ಯದಲ್ಲಿ ಸಚಿವ ಸಂಪುಟ ವಿಸ್ತರಣೆ ಕುರಿತು ಮಾತನಾಡಿದ ಖಾರ್ದ, ಇಂತಹ ಯಾವುದೇ ಕ್ರಮದ ಬಗ್ಗೆ ತಮ್ಮ ಬಳಿ ಮಾಹಿತಿ ಇಲ್ಲ ಎಂದು ತಿಳಿಸಿ, ತಾವು ಸಚಿವ ಸ್ಥಾನದ ಆಕಾಂಕ್ಷಿ ಅಲ್ಲ ಎಂದರು. ತಾವು ಸಂವಿಧಾನಾತ್ಮಕವಾಗಿ ಅವಕಾಶ ಇರುವವರೆಗೆ ವಿಧಾನಸಭಾಧ್ಯಕ್ಷರಾಗಿ ಮುಂದುವರಿಯುವುದಾಗಿ ಹೇಳಿದರು. ಭವಿಷ್ಯದಲ್ಲಿ ಪಕ್ಷವು ಟಿಕೆಟ್ ನೀಡಿದರೆ ಮತ್ತು ಜನರು ತಮ್ಮನ್ನು ಆಯ್ಕೆ ಮಾಡಿದರೆ, 20 ವರ್ಷಗಳ ನಂತರ ಮುಖ್ಯಮಂತ್ರಿ ಸ್ಥಾನಕ್ಕೆ ಸಹ ಬೇಡಿಕೆ ಇಡಬಹುದು ಎಂದರು.

### ಸುಳ್ಳು ಜಾತಿ ಪ್ರಮಾಣ ಪತ್ರ ಕೊಡಿಸಲು ರಾಜಕೀಯ ನಾಯಕರ ಸ್ಪರ್ಧೆ

# ಮೀಸಲಾತಿ ಹೆಚ್ಚಳಕ್ಕೆ 9ನೇ ಶೆಡ್ಯೂಲ್‌ಗೆ ಸೇರಿಸಲು ಕೇಂದ್ರ ಬಳಿ ನಿಯೋಗ; ಉಗ್ರಪ್ಪ

**ವಿಜಯಪುರ,ಏ.21**-ಸುಳ್ಳು ಜಾತಿ ಪ್ರಮಾಣ ಪತ್ರಗಳನ್ನು ಕೊಡಿಸುವ ಸ್ಪರ್ಧೆ ರಾಜ್ಯದ ರಾಜಕೀಯ ನಾಯಕರಲ್ಲಿ ನಡೆಯುತ್ತಿದೆ ಎಂದು ಮಾಜಿ ಸಂಸದ ವಿ.ಎಸ್. ಉಗ್ರಪ್ಪ ಆರೋಪಿಸಿದರು.

ವಿಜಯಪುರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 2020ರಿಂದ ಇಲ್ಲಿಯವರೆಗೂ ಸುಮಾರು 2,39,166 ಸುಳ್ಳು ಜಾತಿ ಪ್ರಮಾಣ ಪತ್ರ ಪಡೆಯಲಾಗಿದೆ. ಅದರಲ್ಲಿ ವಿಜಯಪುರ ಜಿಲ್ಲೆಯಲ್ಲಿ ಸುಮಾರು 56,814 ಸುಳ್ಳು ಜಾತಿ ಪ್ರಮಾಣ ಪತ್ರಗಳನ್ನು ನೀಡಲಾಗಿದೆ ಎಂದು ತಿಳಿಸಿದರು.

ಸದ್ಯ ಮೀಸಲಾತಿ ಹೆಚ್ಚಳಕ್ಕೆ ಕೋರ್ಟ್‌ನಿಂದ ತಡೆಯಾಜ್ಞೆ ಇದೆ. ಈ ತಡೆಯಾಜ್ಞೆ ತೆರವುಗೊಳಿಸಲು ರಾಜ್ಯ ಸರ್ಕಾರ ಕೂಡಲೇ ಅರ್ಜಿ ಸಲ್ಲಿಸಬೇಕು. ತಡೆಯಾಜ್ಞೆ ತೆರವು ಆಗದಿದ್ದರೆ ಸುಪ್ರೀಂ ಕೋರ್ಟ್‌ನಲ್ಲಿ ವಿಶೇಷ ಮೇಲ್ಮನವಿ (ಎಸ್.ಎಲ್.ಪಿ) ಸಲ್ಲಿಸಿ ನಮಗೆ ಪರಿಹಾರ ಕೊಡಿಸುವ ಕೆಲಸ ಮಾಡಬೇಕು, ಒಂದು ವೇಳೆ ಮಾಡದಿದ್ದರೆ ಇದರ ಪರಿಣಾಮ ಎಲ್ಲ ರಾಜಕೀಯ ನಾಯಕರು ಎದುರಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಮೀಸಲಾತಿ ಪ್ರಮಾಣ ಜಾಸ್ತಿ ಮಾಡಿ



2023ರಲ್ಲಿಯೇ ಕಳುಹಿಸಿಕೊಟ್ಟರು ಕೇಂದ್ರ ಸರ್ಕಾರ ಇದುವರೆಗೂ ತೀರ್ಮಾನ ತೆಗೆದುಕೊಂಡಿಲ್ಲ. ಸಂಸದರಾದ ರಮೇಶ ಜಿಗಜಿಣಗಿ, ಪ್ರಹ್ಲಾದ ಜೋಶಿ, ವಿ. ಸೋಮಣ್ಣ, ಶೋಭಾ ಕರಂದ್ಲಾಜೆ ಏನು ಮಾಡುತ್ತಿದ್ದೀರಿ? ಅನ್ಯಾಯವಾದಾಗಲೂ ಮಾತನಾಡಲಾಗುವುದಿಲ್ಲವೇ ಎಂದು ತರಾಟೆಗೆ ತೆಗೆದುಕೊಂಡ

ಎಸ್ಸಿ, ಎಸ್ಟಿ, ಒಬಿಸಿ ಮೀಸಲಾತಿ ಹೆಚ್ಚಿಸುವ ಸಂಬಂಧ ರಾಜ್ಯ ಸರ್ಕಾರ ಮುತುವರ್ಜಿ ವಹಿಸಿ ಸರ್ವ ಪಕ್ಷಗಳ ನಿಯೋಗದೊಂದಿಗೆ ಪ್ರಧಾನಮಂತ್ರಿ ಭೇಟಿ ಮಾಡಿ ಒಂಬತ್ತನೇ ಶೆಡ್ಯೂಲ್‌ಗೆ ಸೇರಿಸಲು ಪ್ರಯತ್ನಿಸಬೇಕು. ಜೂನ್ ವೇಳೆಗೆ ರಾಜ್ಯ ಸರ್ಕಾರ ನಿಯೋಗ ತೆರಳದಿದ್ದರೆ ರಾಜ್ಯವ್ಯಾಪಿ ಅಹೋರಾತ್ರಿ ಪ್ರತಿಭಟನೆ ನಡೆಸಲಾಗುವುದು ಎಂದು ವಿ.ಎಸ್. ಉಗ್ರಪ್ಪ ಎಚ್ಚರಿಸಿದರು.

ಮುಖ್ಯಮಂತ್ರಿ ನಿಯೋಗ ಕರೆದುಕೊಂಡು ಹೋಗುವ ವಿಚಾರದಲ್ಲಿ ಎಸ್ ಅಥವಾ ನೋ ಎಂಬುದನ್ನಷ್ಟೇ ಹೇಳಲಿ.

ವಿನಾಕಾರಣ ಮುಂದೂಡುವುದನ್ನು ಸಹಿಸುವುದಿಲ್ಲ, ಕೇಂದ್ರ ಸರ್ಕಾರ ಸಾಮಾಜಿಕ ನ್ಯಾಯಕ್ಕೆ ಧಕ್ಕೆ ಬರುವ ರೀತಿಯಲ್ಲಿ ನಡೆದುಕೊಂಡರೆ ಹೋರಾಟದ ಮೂಲಕ ಉತ್ತರ ನೀಡುತ್ತೇವೆ .

ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿಯಾಗಿದ್ದಾಗ ಎಸ್ಟಿ ಸಮುದಾಯಕ್ಕೆ ಶೇ.3ರಿಂದ 7 ಮತ್ತು ಎಸ್ಸಿ ಸಮುದಾಯಕ್ಕೆ ಶೇ.15ರಿಂದ 17ಕ್ಕೆ ಮೀಸಲಾತಿ ಹೆಚ್ಚಳ ಮಾಡಿ ಒಟ್ಟಾರೆಯಾಗಿ ಶೇ.50 ಇದ್ದ ಮೀಸಲಾತಿಯನ್ನು ಶೇ.56ಕ್ಕೆ ಹೆಚ್ಚಳ ಮಾಡಿದರು.

ಆದರೆ, ಸಾಂವಿಧಾನಿಕ ಸಿಂಧುತ್ವ ಕೊಡಿಸುವ ಯಾವ ಮಾರ್ಗಗಳನ್ನು ಅನುಸರಿಸಲಿಲ್ಲ. ಅವರ ಅವಧಿಯಲ್ಲಿ ಕೇಂದ್ರ ಮತ್ತು ರಾಜ್ಯದಲ್ಲಿ ಬಿಜೆಪಿ ಸರ್ಕಾರವೇ ಇದ್ದರೂ ಶೇ.56 ಮೀಸಲಾತಿಯನ್ನು ಒಂಬತ್ತನೇ ಶೆಡ್ಯೂಲ್‌ಗೆ ಸೇರಿಸಿ, ಮೀಸಲಾತಿಗೆ ಸಾಂವಿಧಾನಿಕ ಸಿಂಧುತ್ವ ದೊರಕಿಸಲು ಮುತುವರ್ಜಿ ವಹಿಸಲಿಲ್ಲ.

2023ರಲ್ಲಿ ಅಧಿಕಾರಕ್ಕೆ ಬಂದ ಸಿದ್ಧರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರಕ್ಕೆ ಸಹ ಈ ಬಗ್ಗೆ ಅನೇಕ ಬಾರಿ ಮನವಿ ಮಾಡಿದರೂ ಯಾವುದೇ ಪ್ರಯೋಜನವಾಗಲಿಲ್ಲ. ಬರೀ ಮುಂದೂಡುವ ಕೆಲಸವಷ್ಟೇ ಆಯಿತು ಎಂದು ಬೇಸರ ವ್ಯಕ್ತಪಡಿಸಿದರು.

# ಬಸವಣ್ಣನವರ ವಚನಗಳು ಸಮಾಜಕ್ಕೆ ದಾರಿ ದೀಪವಾಗಿವೆ-ಮಂಗಳಾ

■ ಕನ್ನಡ ಮಾತೃ ಭೂಮಿ ವಾರ್ತೆ

**ವಡಗೇರಾ,ಏ.21**-ಬಸವಣ್ಣನವರು ಸಮ ಸಮಾಜ ನಿರ್ಮಾಣದ ಕನಸು ಕಂಡ ಮಹಾನ್ ಚೇತನ ಇಂದಿಗೂ ಅವರ ವಚನಗಳು ಸಮಾಜಕ್ಕೆ ದಾರಿ ದೀಪವಾಗಿವೆ ಎಂದು ತಹಸೀಲ್ದಾರ್ ಶ್ರೀಮತಿ ಮಂಗಳಾ. ಎಂ ಹೇಳಿದರು. ತಾಲೂಕು ಆಡಳಿತದ ವತಿಯಿಂದ ಪಟ್ಟಣದ ತಹಸೀಲ್ದಾರ್ ಕಚೇರಿಯಲ್ಲಿ ಹಮ್ಮಿಕೊಂಡಿದ್ದ ವಿಶ್ವ ಗುರು ಬಸವಣ್ಣನವರ 893ನೇ ಜಯಂತೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ಬಸವಣ್ಣನವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾಲಾರ್ಪಣೆ ಮಾಡಿ



ಮಾತನಾಡಿದರು. ಕಾಯಕದಲ್ಲಿ ಕೈಲಾಸ ಕಂಡ ಮಹಾನ್ ಶರಣ12ನೇ ಶತಮಾನದಲ್ಲಿ ಜಾತಿ ವ್ಯವಸ್ಥೆ ಮೂಢನಂಬಿಕೆಗಳ ವಿರುದ್ಧ ಸಮಾಜದಲ್ಲಿ ಜಾಗೃತಿ ಮೂಡಿಸಿ ಎಲ್ಲರೂ ಒಂದೇ ಎಂಬ ಭಾವನೆಯನ್ನು ಬಿತ್ತಿದ ಮಹಾನ್ ಶರಣ ಬಸವಣ್ಣನವರು ಜಾತಿ ವ್ಯವಸ್ಥೆ ಮೂಢನಂಬಿಕೆ ವಿರುದ್ಧ ಕ್ರಾಂತಿ ಮಾಡಿದ್ದರು ಕಾಯಕದಿಂದಲೇ ಮನುಷ್ಯನ ಜನ್ಮ ಸಾರ್ಥಕ ಎಂದು ತೋರಿಸಿಕೊಟ್ಟಿದ್ದಾರೆ ಅವರ ತತ್ವ ಆದರ್ಶಗಳನ್ನು ಪ್ರತಿಯೊಬ್ಬರು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ವೀರಶೈವ ಲಿಂಗಾಯತ ಸಮಾಜದ ಮುಖಂಡರಾದ ಡಾ.ಸುಭಾಷ್ ಕರಣಗಿ, ಶಿವರಾಜ್ ಬಾಗುರ,ಎಸ್ ಬಿ ಐ ಬ್ಯಾಂಕ್ ವ್ಯವಸ್ಥಾಪಕರಾದ ದೇವೇಂದ್ರಪ್ಪ,ತಹಸೀಲ್ದಾರ್ ಕಚೇರಿಯ ಸಿಬ್ಬಂದಿಗಳಾದ ರಾಮನಗೌಡ, ಬಸಯ್ಯಸ್ವಾಮಿ, ರೂಪಾ, ನಹಿಮ್ ಸಾಬ್, ರಾಜಶೇಖರ್ ಸ್ವಾಮಿ, ಅಂಬಿಕಾ,ಸಿದ್ದಮ್ಮ,ಮತ್ತು ಬಸವ ಅಭಿಮಾನಿಗಳು ಹಾಗೂ ಇನ್ನಿತರರು ಉಪಸ್ಥಿತರಿದ್ದರು

## ಬಸವಣ್ಣನವರು ಸಮಾಜದ ಏಕತೆಗೆ, ಕೆಳ ವರ್ಗ, ಮೇಲ್ವರ್ಗ ಅಳಿಸುವ ಮಹಾನ ಶಾಂತಿದೂತ ಪ್ರಕಾಶಗೌಡ ಬಿರಾದಾರ

■ ಕನ್ನಡ ಮಾತೃ ಭೂಮಿ ವಾರ್ತೆ

**ಝಳಕಿ,ಏ.21**-12ನೇ ಶತಮಾನದಲ್ಲಿ ಸಮಾನತೆಗೆ, ಶಾಂತತೆಗಾಗಿ ಹೋರಾಡಿದ, ಮಹಾನ ಶಾಂತಿದೂತ ಬಸವಣ್ಣನವರು ನಮಗೆ ದಾರಿದೀಪ, ಇಂತಹ ಮಹಾನ ವ್ಯಕ್ತಿಗಳ ಆಚರಣೆ ಮಾಡುವದಷ್ಟೇ ಮುಖ್ಯವಲ್ಲ, ಅವರು ಹಾಕಿಕೊಟ್ಟ ದಾರಿಯಲ್ಲಿ ಸಾಗಿದಾಗ ಮಾತ್ರ, ನಾವು ಆಚರಿಸುವ ಆಚರಣೆಗೆ ಒಂದು ಮೆರಗು ಎಂದು ಕರ್ನಾಟಕ ರಕ್ಷಣಾ ವೇದಿಕೆ ಇಂಡಿ ತಾಲೂಕಾ ಉಪಾಧ್ಯಕ್ಷರು ಪ್ರಕಾಶಗೌಡ ಬಿರಾದಾರ ಅನಿಸಿಕೆ ವ್ಯಕ್ತಪಡಿಸಿದರು.

ಝಳಕಿ ಗ್ರಾಮದ ಬಸ್ಸ ನಿಲ್ದಾಣದಲ್ಲಿ ಬಸವ ಜಯಂತಿ ಆಚರಣೆ ಸಂಪ್ರದಾಯ ಮತ್ತು ಕಾನೂನಾತ್ಮಕವಾಗಿ ಸಾರಿಗೆ ನಿಯಂತ್ರಕ ರುದ್ರೇಶ ಗಜಾಕೋಶ ಮತ್ತು ಪ್ರಯಾಣಿಕರ ಸಹಯೋಗದಲ್ಲಿ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಸಾರಿಗೆ ನಿಯಂತ್ರಕ ಕಲ್ಲಪ್ಪ ಅಗಸರ, ಚಂದುಗೌಡ ಪಾಟೀಲ್, ಪ್ರಭಾಕರ ಬಿರಾದಾರ, ಉಮೇಶ್ ತಳವಾರ, ರಾಜು ತಳವಾರ, ಮೋದಿನ ಮುಲ್ಲಾ, ಭೀರು ತಳವಾರ, ಸಿದ್ದು ತಳವಾರ, , ಶಿವರಾಜ್ ಆಕಳವಾಡಿ ಹಾಗೂ ಪ್ರಯಾಣಿಕರು ಉಪಸ್ಥಿತರಿದ್ದರು.

# ...ಮೊದಲನೇ ಪುಟದಿಂದ

## ಫೋರ್ಜರಿ ಮೂಲಕ ಜಮೀನು ಮಾರಾಟ ಆರೋಪ: ನ್ಯಾಯ ಸಿಗದಿದ್ದರೆ ಕಾನೂನು ಹೋರಾಟ-ವೆಂಕಟೇಶ

ಮುತ್ತಜ್ಜನಿಗೆ ನೀಡಲ್ಪಟ್ಟದ್ದಾಗಿದೆ. ಆದರೆ ಕೆಲವು ವ್ಯಕ್ತಿಗಳು ನಕಲಿ ದಾಖಲೆಗಳನ್ನು ಸೃಷ್ಟಿಸಿ, ತಮ್ಮ ಹೆಸರನ್ನು ಸೇರಿಸಿಕೊಂಡು ನಂತರ ಬೇರೆವರಿಗೆ ಮಾರಾಟ ಮಾಡಿದ್ದಾರೆ ಎಂದು ಆರೋಪಿಸಿದರು. ಈ ಕುರಿತು ಜಿಲ್ಲಾಧಿಕಾರಿಗಳಿಗೆ ಅರ್ಜಿ ಸಲ್ಲಿಸಲಾಗಿದ್ದು, ಪ್ರಕರಣವನ್ನು ತಹಶೀಲ್ದಾರರಿಗೆ ವರ್ಗಾವಣೆ ಮಾಡಲಾಗಿದೆ. ಆದರೆ ತಹಶೀಲ್ದಾರರು ನ್ಯಾಯಾಲಯಕ್ಕೆ ಹೋಗುವಂತೆ ಸೂಚನೆ ನೀಡಿದ್ದಾರೆ. ಇದೇ ವೇಳೆ ಸಂಬಂಧಿಸಿದವರ ವಿರುದ್ಧ ಪೊಲೀಸ್ ಠಾಣೆಯಲ್ಲಿ ದೂರು ನೀಡಿದರೂ, ತನಿಖೆಯಲ್ಲಿ ಯಾವುದೇ ಸ್ಪಷ್ಟ ಪ್ರಗತಿ ಕಂಡುಬಂದಿಲ್ಲ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು. ನಮ್ಮಿಂದ ಯಾರಾದರೂ ಕಾನೂನುಬದ್ಧವಾಗಿ ಜಮೀನು ಖರೀದಿ ಮಾಡಿಕೊಂಡಿದ್ದರೆ, ಅದರ ದಾಖಲೆಗಳನ್ನು ಸಾರ್ವಜನಿಕವಾಗಿ ಅಥವಾ ನ್ಯಾಯಾಲಯದಲ್ಲಿ ತೋರಿಸಬೇಕು. ಇಲ್ಲವಾದಲ್ಲಿ, ನಮ್ಮ ಹಕ್ಕಿನ ಜಮೀನನ್ನು ಮರುಸ್ವಾಧೀನ ಪಡೆಯಲು ಕ್ರಮ ಕೈಗೊಳ್ಳಲಾಗುತ್ತದೆ ಎಂದು ಸವಾಲಾಕಿದರು.

## ಪ್ರಧಾನಿಯಿಂದ ಸಾರ್ವಜನಿಕ ಪ್ರಸಾರ ಸಂಸ್ಥೆಯ ದುರುಪಯೋಗ: ಚುನಾವಣಾ ಆಯೋಗಕ್ಕೆ ಸಿಪಿಐ(ಎಂ) ದೂರು

ಬಳಸಲಾಗಿದೆ ಎಂದು ಸಿಪಿಐ(ಎಂ) ಆರೋಪಿಸಿದೆ. ತಮಿಳುನಾಡು ಮತ್ತು ಪಶ್ಚಿಮ ಬಂಗಾಳ ರಾಜ್ಯಗಳಲ್ಲಿ ವಿಧಾನಸಭಾ ಚುನಾವಣೆಗಳು ಸಮೀಪಿಸುತ್ತಿರುವ ಸಂದರ್ಭದಲ್ಲಿ ಈ ಭಾಷಣ ನಡೆದಿರುವುದು ಮಾದರಿ ನೀತಿ ಸಂಹಿತೆಯ ಉಲ್ಲಂಘನೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ. ಪ್ರಧಾನ ಕಾರ್ಯದರ್ಶಿ ಎಂ.ಎ. ಬೇಬಿ ತಮ್ಮ ಪತ್ರದಲ್ಲಿ, ಭಾಷಣದ ವಿಷಯ, ಧ್ವನಿ ಮತ್ತು ಸಂದೇಶ ನೀಡಿಕೆ ಸಂಪೂರ್ಣವಾಗಿ ರಾಜಕೀಯ ಸ್ವರೂಪದ್ದಾಗಿದ್ದು, ವಿಪಕ್ಷಗಳನ್ನು ಗುರಿಯಾಗಿಸಿಕೊಂಡಿರುವುದು ಸ್ಪಷ್ಟವಾಗಿದೆ ಎಂದು ತಿಳಿಸಿದ್ದಾರೆ. ಇದು ಸರ್ಕಾರದ ಅಧಿಕೃತ ಸಂವಹನವೆಂದು ಪರಿಗಣಿಸಲಾಗುವುದಿಲ್ಲ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ. ಮಾದರಿ ನೀತಿ ಸಂಹಿತೆಯ ವಿಭಾಗ 4ರಲ್ಲಿ ಸ್ಪಷ್ಟವಾಗಿ, ಅಧಿಕಾರದಲ್ಲಿರುವ ಪಕ್ಷವು ಸಾರ್ವಜನಿಕ ಖಜಾನೆಯ ವೆಚ್ಚದಲ್ಲಿ ಮಾಧ್ಯಮಗಳನ್ನು ಬಳಸಿಕೊಂಡು ತನ್ನ ಸಾಧನೆಗಳ ಪ್ರಚಾರ ನಡೆಸಬಾರದು ಎಂದು ಹೇಳಲಾಗಿದೆ. ಆದರೆ ಈ ನಿಯಮವನ್ನು ಉಲ್ಲಂಘಿಸಿ ದೂರದರ್ಶನವನ್ನು ರಾಜಕೀಯ ಸಂದೇಶ ಹರಡುವ ವೇದಿಕೆಯಾಗಿಸಲಾಗಿದೆ ಎಂದು ಸಿಪಿಐ(ಎಂ) ಆರೋಪಿಸಿದೆ. ಈ ರೀತಿಯ ಕ್ರಮಗಳು ಚುನಾವಣೆಯಲ್ಲಿ ಸಮಾನ ಅವಕಾಶವನ್ನು ಹಾಳುಮಾಡಿ, ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣಾ ಪ್ರಕ್ರಿಯೆಗೆ ಧಕ್ಕೆ ಉಂಟುಮಾಡುತ್ತವೆ ಎಂದು ಪಕ್ಷವು ತಿಳಿಸಿದೆ. ಆದ್ದರಿಂದ ಪ್ರಧಾನ ಮಂತ್ರಿಗಳು ಹಾಗೂ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಚುನಾವಣಾ ಆಯೋಗವು ತಕ್ಷಣವೇ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಕೆ.ಜಿ.ವಿರೇಶ ಆಗ್ರಹಿಸಿದ್ದಾರೆ.

## ಜನಗಣತಿ ಕಾರ್ಯಕ್ಕೆ ಗೈರು: ಸಹ ಶಿಕ್ಷಕಿ ಅಮಾನತ್ತು

ಜನಗಣತಿ ಚಾರ್ಜ್ ಅಧಿಕಾರಿಗಳು ಕಾರಣ ಕೇಳುವ ನೋಟಿಸ್ ಹೊರಡಿಸಿದ್ದರು. ನೋಟಿಸಿಗೂ ಉತ್ತರ ನೀಡದೆ ಬೇಜವಾಬ್ದಾರಿ ತೋರಿದ್ದರಿಂದ ಜನಗಣತಿ ಕಾರ್ಯಕ್ಕೆ ತೊಂದರೆಯಾಗಿದೆ ಎಂಬ ಕಲಬುರಗಿ ತಹಶೀಲ್ದಾರ ಅವರ ವರದಿ ಆಧಾರದ ಮೇಲೆ ಶಿಕ್ಷಕಿಯನ್ನು ಅಮಾನತ್ತುಗೊಳಿಸಲಾಗಿದೆ. ನೌಕರರು ಅಮಾನತ್ತಿನ ಅವಧಿಯಲ್ಲಿ ಸಕ್ಷಮ ಪ್ರಾಧಿಕಾರದ ಪೂರ್ವಾನುಮತಿ ಪಡೆಯದೇ ಕೇಂದ್ರ ಸ್ಥಾನ ಬಿಡತಕ್ಕದಲ್ಲ. ಅಮಾನತ್ತಿನ ಅವಧಿಯಲ್ಲಿ ಕರ್ನಾಟಕ ನಾಗರಿಕ ಸೇವಾ ನಿಯಮ-98 ಎ ಮತ್ತು ಸರ್ಕಾರದ ಅಧಿಸೂಚನೆ ದಿ.10.08.1987ರ ಪ್ರಕಾರ ಜೀವನಾಂಶ ಭತ್ಯೆ ಪಡೆಯಲು ಅರ್ಹರಾಗಿರುತ್ತಾರೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

## ಹೊಸೂರು ಗ್ರಾಮದ ಶ್ರೀ ಸಂಗಮೇಶ್ವರ ದೇವಸ್ಥಾನ ನೂತನ ಶಿಲಾ ಮೂರ್ತಿಗಳ ಭವ್ಯ ಮೆರವಣಿಗೆ

ಕಾರ್ಯಗಳು ನಡೆದವು. ಮಹಿಳೆಯರ ಪೂರ್ಣ ಕುಂಭ ಕಳಸಗಳು ಹಾಗೂ ವಿವಿಧ ವಾದ್ಯಗಳೊಂದಿಗೆ ಅದ್ದೂರಿಯ ಸ್ವಾಗತ ನೀಡಲಾಯಿತು. ಇಡಿ ಗ್ರಾಮವೇ ಹಬ್ಬದ ಆಚರಣೆಯಂತೆ ಭಾಗವಹಿಸಿದ್ದರು. ಮೆರವಣಿಗೆಯಲ್ಲಿ ಭಾಗವಹಿಸಿದ್ದ ನಗರ ಶಾಸಕ ಡಾ.ಶಿವರಾಜ ಪಾಟೀಲ್ ಮಾತನಾಡಿ ಗ್ರಾಮ ಐತಿಹಾಸಿಕ ಶ್ರೀ ಸಂಗಮೇಶ್ವರ ದೇವಸ್ಥಾನ ಜೀರ್ಣೋದ್ದಾರ ಅಂಗವಾಗಿ ನೂತನ ಮೂರ್ತಿಗಳ ಪ್ರತಿಷ್ಠಾನ ಏ.23 ರಂದು ನಡೆಯಲಿದೆ. ಇಂದು ಮೂರ್ತಿಗಳ ಮೆರೆವಣಿಗೆ ನಡೆದಿದೆ. ಗ್ರಾಮದ ಸಮಸ್ತ ಜನರು ಒಂದಾಗಿ ಇತಿಹಾಸ ದೇವಸ್ಥಾನ ಅಭಿವೃದ್ದಿಗೆ ಮುಂದಾಗಿರುವ ಮಾದರಿ ಕೆಲಸವಾಗಿದೆ ಎಂದರು. ಮೂರು ದಿನ ನಡೆಯಲಿರುವ ಕಾರ್ಯಕ್ರಮದಲ್ಲಿ ಭಕ್ತರು ಭಾಗವಹಿಸುವಂತೆ ಮನವಿ ಮಾಡಿದರು.ದೇವಸ್ಥಾನ ಸಮಿತಿ ಮುಖಂಡ ಎಂ.ವಿರುಪಾಕ್ಷಿ ಮಾತನಾಡಿ ಗ್ರಾಮದ ಶ್ರೀ ಸಂಗಮೇಶ್ವರ ಉದ್ಭವ ಮೂರ್ತಿಯಾಗಿದೆ. ಹಳೆಯದಾಗಿರುವ ದೇವಸ್ಥಾನ ಅಭಿವೃದ್ದಿಗೊಳಿಸಿ ನೂತನ ಶಿಲಾಮೂರ್ತಿಗಳನ್ನು ಸ್ಥಾಪಿಸಲಾಗುತ್ತದೆ. ಗ್ರಾಮ ಸರ್ವ ಜಾತಿ,ಧರ್ಮವರು ಬೆಂಬಲಿಸಿ ಅದ್ದೂರಿ ಮೂರು ದಿನ ಕಾರ್ಯಕ್ರಮ ನಡೆಸಲಾಗುತ್ತಿದೆ. ಭಕ್ತರು ಭಾಗವಹಿಸುವಂತೆ ಮನವಿ ಮಾಡಿದರು.

ಮೆರವಣಿಗೆಯಲ್ಲಿ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರಿಯ ವಿಶ್ವವಿದ್ಯಾಲಯದ ರಾಜಯೋಗಿನಿ ಸ್ಮಿತಕ್ಕ, ಯುವ ಕಾಂಗ್ರೆಸ್ ಮುಖಂಡ ರವಿ ಬೋಸರಾಜ, ಮಹ್ಮದ ಶಾಲಂ, ಪಾಲಿಕೆ ಮಾಜಿ ಸದಸ್ಯ ಜಯಣ್ಣ, ನರಸಿಂಹಲು ಮಾಡಗಿರಿ, ರುದ್ರಪ್ಪ ಅಂಗಡಿ, ಶಿವಪ್ಪ ಮಾಲಿ ಪಾಟೀಲ ಹೊಸೂರು, ರವೀಂದ್ರ ಜಲ್ದಾರ, ಭೀಮಣ್ಣ ಮಂಚಾಲ,ಹನುಮಂತಪ್ಪ ಸೇರಿದಂತೆ ಗ್ರಾಮದ ಹಿರಿಯರು, ಮಹಿಳೆಯರು ಜನರು ಭಾಗಿಯಾದರು.

## ಸರ್ಕಾರಿ ಜಮೀನು ಒತ್ತುವರಿ ದೋಬಿಘಾಟ್ ನಿರ್ಮಾಣ : ಕ್ರಮಕ್ಕೆ ಒತ್ತಾಯ

ತೊಂದರೆ ಉಂಟಾಗುತ್ತಿದೆ. ಇದಕ್ಕೆ ವಿರುದ್ಧವಾಗಿ, ಇತರ ಸಮುದಾಯಗಳಿಗೆ ಈಗಾಗಲೇ ಹಲವು ಸೌಲಭ್ಯಗಳನ್ನು ಒದಗಿಸಿರು ವುದು ಕಂಡುಬರುತ್ತಿದ್ದು, ಇದು ಸಮಾನತೆಯ ತತ್ವಕ್ಕೆ ವಿರುದ್ಧವಾಗಿದೆ ಎಂದು ದೂರಿದರು. ಸರ್ಕಾರಿ ಜಮೀನಿನ ಮೇಲಿನ ಅನಧಿಕೃತ ಒತ್ತುವರಿಯನ್ನು ತಕ್ಷಣ ತಡೆಹಿಡಿಯಬೇಕು, ಆ ಜಾಗವನ್ನು ದಲಿತ ಸಮುದಾಯದ ಅಭಿವೃದ್ಧಿಗಾಗಿ ಮೀಸಲಿಡಬೇಕು, ಆ ಸ್ಥಳದಲ್ಲಿ ಕಲ್ಯಾಣ ಮಂಟಪ ಅಥವಾ ಗ್ರಂಥಾಲಯ ನಿರ್ಮಾಣ ಮಾಡಲು ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು. ಈ ಮನವಿಯನ್ನು ತಕ್ಷಣ ಪರಿಗಣಿಸದಿದ್ದಲ್ಲಿ, ಮುಂದಿನ ದಿನಗಳಲ್ಲಿ ಸಮುದಾಯದ ಮಹಿಳೆಯರು, ಯುವಕರು ಹಾಗೂ ಬುದ್ಧಿಜೀವಿಗಳನ್ನು ಒಳಗೊಂಡು ಬೃಹತ್ ಹೋರಾಟವನ್ನು ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಸಿದರು. ಈ ಸಂದರ್ಭದಲ್ಲಿ ಅಧ್ಯಕ್ಷ ವೆಂಕಟೇಶ ಅರಗೋಲ್, ಉಪಾಧ್ಯಕ್ಷ ನಶಾಂತ ಕುಮಾರ, ರಮೇಶ ವಡವಾಟಿ, ಪರಶುರಾಮ, ವೆಂಕಟೇಶ, ಬಸವರಾಜ ಕ್ಯಾದಿಗೇರಾ, ಯಮನೂರಪ್ಪ, ಅಮರೇಶ ಸೇರಿದಂತೆ ಅನೇಕರು ಇದ್ದರು.

## ಪಿಂಜಾರ ನದಾಫ್ ಸಮಾಜಕ್ಕೆ ಪ್ರತ್ಯೇಕ ಅಭಿವೃದ್ಧಿ ನಿಗಮ ಮಂಡಳಿ ಸ್ಥಾಪನೆಗೆ ಮನವಿ

ಹಿಂದಿನಿಂದ ಹತ್ತಿ ಮತ್ತು ಅರಳೆಯಿಂದ ಗಾದಿ, ದಿಂಬು, ಜಮಖಾನ, ಗುಡಾರ ಹಾಗೂ ಹಗ್ಗ ತಯಾರಿಕೆಯಲ್ಲಿ ತೊಡಗಿದ್ದ ಈ ಸಮುದಾಯವು ಆಧುನಿಕ ತಂತ್ರಜ್ಞಾನದಿಂದಾಗಿ ತಮ್ಮ ಸಾಂಪ್ರದಾಯಿಕ ವೃತ್ತಿಯನ್ನು ಕಳೆದುಕೊಂಡಿದೆ.

1994ರಲ್ಲಿ ಹಿಂದುಳಿದ ಪ್ರವರ್ಗ-1ರಲ್ಲಿ ಸೇರಿಸಲಾದರೂ, ಇಂದಿಗೂ ಸಮರ್ಪಕ ಸರ್ಕಾರಿ ಸೌಲಭ್ಯಗಳು ದೊರೆಯುತ್ತಿಲ್ಲ ಎಂದು ಆರೋಪಿಸಿದ್ದಾರೆ.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಮತ್ತು ಕೆಎಂಡಿಸಿ ನಡುವೆ ಸಂಯೋಜನೆ ಕೊರತೆ ಯಿಂದಾಗಿ ಸೌಲಭ್ಯಗಳಿಗಾಗಿ ಅಲೆದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಕಳೆದ 30 ವರ್ಷಗಳಿಂದ ಪ್ರತ್ಯೇಕ ಅಭಿವೃದ್ಧಿ ಮಂಡಳಿ ಸ್ಥಾಪನೆಗಾಗಿ ಹೋರಾಟ ನಡೆಸುತ್ತಿದ್ದರೂ ಯಾವುದೇ ಸ್ಪಂದನೆ ಸಿಗದಿರುವುದಕ್ಕೆ ಅಸಮಾಧಾನ ವ್ಯಕ್ತಪಡಿಸಿದರು.

ಪಿಂಜಾರ ನದಾಫ್ ಸಮಾಜಕ್ಕೆ ಪ್ರತ್ಯೇಕ ನಿಗಮ ಮಂಡಳಿ ಸ್ಥಾಪಿಸಿ, ಸಮರ್ಪಕ ಅನುದಾನ ಘೋಷಿಸಬೇಕು ಎಂದು ಒತ್ತಾಯಿಸಿದರು. ಇಲ್ಲದಿದ್ದಲ್ಲಿ ರಾಜ್ಯ ಮಟ್ಟದಲ್ಲಿ ಹಂತ ಹಂತವಾಗಿ ಹೋರಾಟ ಕೈಗೊಳ್ಳುವುದಾಗಿ ಎಚ್ಚರಿಕೆ ನೀಡಿದ್ದಾರೆ. ಈ ಸಂದರ್ಭದಲ್ಲಿ ರಾಜ್ಯಾಧ್ಯಕ್ಷ ಇಮ್ರಾನ್ ಬಡೇಸಾಬ್, ಜಿಲ್ಲಾ ಅಧ್ಯಕ್ಷ ಎಂ.ಡಿ. ಜಾವಿದ್, ಮಹಿಳಾ ಘಟಕದ ಜಿಲ್ಲಾ ಅಧ್ಯಕ್ಷೆ ಖಾಸಿಂಭೀ, ಜಿಲ್ಲಾ ಸಂಚಾಲಕರು ಹಾಗೂ ಮುಖಂಡರಾದ ಶಫಿ ಗುಂಜಳ್ಳಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

## ಕ್ಷೇತ್ರ ಪುನರ್‌ವಿಂಗಡಣೆ ಬಿಜೆಪಿಯ ರಾಜಕೀಯ ಹುನ್ನಾರ-ಶ್ರೀದೇವಿ ನಾಯಕ

ಬಿಜೆಪಿ ಪಕ್ಷವು ಸ್ವತಃ ಮಹಿಳಾ ವಿರೋಧಿ ಪಕ್ಷವಾಗಿದ್ದು, ಕಾಂಗ್ರೆಸ್ ಮೇಲೆ ಮಹಿಳಾ ವಿರೋಧಿ ಎಂಬ ಆರೋಪ ಹೇರಲು ಪೂರ್ವನಿಯೋಜಿತ ಕುತಂತ್ರ ನಡೆಸುತ್ತಿದೆ ಎಂದು ಆರೋಪಿಸಿದರು. 2011ರ ಜನಗಣತಿ ಅಂಕಿ ಅಂಶಗಳ ಆಧಾರದ ಮೇಲೆ ಕ್ಷೇತ್ರ ಪುನರ್‌ವಿಂಗಡಣೆ ಮಾಡುವುದು ಅವೈಜ್ಞಾನಿಕವಾಗಿದ್ದು, ಹೊಸ ಜನಗಣತಿ ಮಾಹಿತಿಯ ಆಧಾರದ ಮೇಲೆ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ಮೋದಿ ಸರ್ಕಾರದ ವಿರುದ್ಧ ಪ್ರತಿಭಟನೆಗೆ ಸನ್ನಿವೇಶಗಳು ನಿರ್ಮಾಣವಾಗುತ್ತಿವೆ ಎಂದು ಎಚ್ಚರಿಕೆ ನೀಡಿದ ಅವರು, ಮಹಿಳೆಯರು ಈ ವಿಷಯವನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕು. ಬಿಜೆಪಿ ಪಕ್ಷ ಮಹಿಳಾ ಪರವಾಗಿದ್ದರೆ ಕ್ಷೇತ್ರ ವಿಂಗಡಣೆ ಎಂಬ ಅಂಶವನ್ನು ಬಿಟ್ಟು ಮೊದಲು ಮಹಿಳಾ ಮೀಸಲಾತಿ ಕಾನೂನು ಜಾರಿಗೆ ತರಲಿ ಎಂದು ಸವಾಲು ಹಾಕಿದರು. ಈ ಸಂದರ್ಭದಲ್ಲಿ ಪ್ರಮುಖರಾದ ಭಾಗ್ಯಶ್ರೀ, ಶಶಿಕಲಾ ಭಿಮರಾಯ, ಮಂಜುಳಾ, ಪ್ರೇಮಲತಾ, ನಿತ್ಯ, ಮಾಲಾ ಭಜಂತ್ರಿ, ತಿಮಲಮ್ಮ ಸೇರಿ ಅನೇಕರಿದ್ದರು.

## ಪಲಕನಮರಡಿ, ವಂದಲಿ ಗ್ರಾಮಗಳಲ್ಲಿ ನೀರಿನ ಹಾಹಾಕಾರ : ತಾ.ಪಂ ಕಚೇರಿಗೆ ಮುತ್ತಿಗೆ

■ ಕನ್ನಡ ಮಾತೃ ಭೂಮಿ ವಾರ್ತೆ

**ದೇವದುರ್ಗ,ಏ.21-**ಸಮೀಪದ ಅರಕೇರಾ ತಾಲೂಕು ವ್ಯಾಪ್ತಿಯ ಪಲಕನಮರಡಿ ಮತ್ತು ವಂದಲಿ ಗ್ರಾಮಗಳಲ್ಲಿ ಕುಡಿವ ನೀರಿನ ಹಾಹಾಕಾರ ಉಂಟಾಗಿದ್ದು,ಗ್ರಾಮಸ್ತರು ಜಮೀನುಗಳಲ್ಲಿರುವ ಕೊಳುವೆ ಬಾವಿಗಳಿಗೆ ಅಲೆದಾಡುತ್ತಿದ್ದಾರೆ. ಗ್ರಾ.ಪಂ ಮತ್ತು ತಾ.ಪಂ ಆಡಳಿತ ವ್ಯವಸ್ಥೆ ವಿಫಲಗೊಂಡಿದ್ದು,ತಾ.ಪಂ ಕಚೇರಿಗೆ ಮುತ್ತಿಗೆ ಹಾಕಲಾಗುವದು ಎಂದು ರಾಜ್ಯ ರೈತ ಸಂಘ ಮತ್ತು ಹಸಿರು ಸೇನಾ ಸಂಘಟನೆ ತಾಲೂಕು ಸಮಿತಿ ಅಧ್ಯಕ್ಷ ಮರಿಲಿಂಗ ಪಾಟೀಲ್ ಹಾಗೂ ಭಾರತೀಯ ದಲಿತ ಸಮಿತಿ ಜಿಲ್ಲಾಧ್ಯಕ್ಷ ಶಿವಗೇನಿ ಜಿಂಕಲ್ ತಿಳಿಸಿದ್ದಾರೆ.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಮಂಗಳವಾರ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ,ಪಲಕನಮರಡಿ ಮತ್ತು ಇತರೆ 11 ಗ್ರಾಮಗಳಿಗೆ ಕುಡಿವ ನೀರು ಪೂರೈಕೆ ಉದ್ದೇಶದಿಂದ ಬಹುಗ್ರಾಮ ಕುಡಿವ ನೀರಿ ಯೋಜನೆ ಕಲ್ಪಿಸಲಾಗಿದೆ.ಆರಂಭದಲ್ಲಿಯೇ



ವಿಳಂಬವಾಗಿದ್ದ ಕಾಮಗಾರಿ ಅಪೂರ್ಣಗೊಂಡು ಪದೇ ಪದೇ ನೀರಿನ ಅಭಾವ ಸೃಷ್ಟಿಸುತ್ತಿದೆ.

ಕುಡಿವ ನೀರು ನಿರ್ವಹಣೆ ಮಾಡುವ ಗುತ್ತೇದಾರರಿಗೆ ಬಿಲ್ಲು ಪಾವತಿಯಾಗದೇ ಇರುವದರಿಂದ ಮತ್ತು ಯಂತ್ರಗಳು ಕೆಟ್ಟು ಹೋಗಿರುವದರಿಂದ ನೀರು ಪೂರೈಕೆಗೆ ಅಡ್ಡಿಯಾಗಿದೆ ಎನ್ನಲಾಗುತ್ತಿದೆ.

ಅನೇಕ ಬಾರಿ ಪಿಡಿಓ,ತಾ.ಪಂ ಇಓ ಮತ್ತು ಜಿ.ಪಂ ಸಿಇಓರಿಗೆ ತಿಳಿಸಿದರೂ ಸಮಸ್ಯೆಗೆ ಪರಿಹಾರ ದೊರಕದಿರುವದು ದುಃಖಕರ ಸಂಗತಿಯಾಗಿದೆ.ಬೇಸಿಗೆ ದಿನಗಳಲ್ಲಿ ಸಮರ್ಪಕ ಕುಡಿವ ನೀರು ಒದಗಿಸದೇ ಇರುವದರಿಂದ ಕೂಡಲೇ ಪಿಡಿಓರನ್ನು ಅಮಾನತ್ತುಗೊಳಿಸಬೇಕು.

ಜಿ.ಪಂ ವಿಭಾಗದ ಹಿರಿಯ ಅಧಿಕಾರಿಗಳ ತಂಡ ಗ್ರಾಮಕ್ಕೆ ಭೇಟಿ ನೀಡಿ ಕುಡಿವ ನೀರಿನ ಸೌಕರ್ಯ ಒದಗಿಸಬೇಕು.ಈಗಾಗಲೇ ಗ್ರಾ.ಪಂ ಕಚೇರಿ ಆವರಣದಲ್ಲಿ ಸ್ಥಳೀಯರು ಧರಣಿ ಕುಳಿತಿದ್ದಾರೆ.

ಕೂಡಲೇ ಸಂಬಂಧಿಸಿದ ಮೇಲಧಿಕಾರಿಗಳು ಪಲಕನಮರಡಿ ಗ್ರಾ.ಪಂ ವ್ಯಾಪ್ತಿಯ ಗ್ರಾಮಗಳಿಗೆ ಸಮರ್ಪಕ ಕುಡಿವ ನೀಡು ಒದಗಿಸದೇ ಹೋದಲ್ಲಿ ತಾ.ಪಂ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟಿಸಲಾಗುವದು ಎಂದು ರಾಜ್ಯ ರೈತ ಸಂಘ ಮತ್ತು ಹಸಿರು ಸೇನಾ ತಾಲೂಕು ಸಮಿತಿ ಅಧ್ಯಕ್ಷ ಮರಿಲಿಂಗಪಾಟೀಲ್ ಹಾಗೂ ಭಾರತೀಯ ದಲಿತ ಸಂಘರ್ಷ ಸಮಿತಿ ಜಿಲ್ಲಾಧ್ಯಕ್ಷ ಶಿವಗೇನಿ ಜಿಂಕಲ್ ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ಸಂಘಟನೆಗಳ ಪದಾಧಿಕಾರಿಗಳಾದ ಮಲ್ಲೇಶ ನಾಯಕ,ನಾಗರಾಜ ತೆಗ್ಗ್ಯಾಳ,ಅಲ್ಲಾವುದ್ದೀನ್, ರಮೇಶ ನಾಯಕ ಇದ್ದರು.

## ಆಳಂದ ಪುರಸಭೆ: ವಿವಿಧ ಸೌಲಭ್ಯಗಳನ್ನು ಪಡೆಯಲು ಅರ್ಜಿ ಆಹ್ವಾನ

■ ಕನ್ನಡ ಮಾತೃ ಭೂಮಿ ವಾರ್ತೆ

**ಕಲಬುರಗಿ,ಏ.21-**ಆಳಂದ ಪುರಸಭೆ ವತಿಯಿಂದ 2026-27ನೇ ಸಾಲಿನ (ಶೇ. 7.25 ಹಾಗೂ ಶೇ.5)ರ ವ್ಯಕ್ತಿಗತ ಕಲ್ಯಾಣ ಕಾರ್ಯಕ್ರಮಗಳಲ್ಲಿ ಕಾಯ್ದಿರಿಸಲಾಗಿರುವ ಅನುದಾನದಡಿ ಷರತ್ತುಗಳನ್ವಯ ಕೆಳಕಂಡ ವಿವಿಧ ಸೌಲಭ್ಯಗಳನ್ನು ಪಡೆಯಲು ಆಳಂದ ಪುರಸಭೆ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಇತರೆ ಹಿಂದುಳಿದ ಬಡಜನರು ಹಾಗೂ ವಿಕಲಚೇತನ ವರ್ಗಕ್ಕೆ ಸೇರಿದ ಅರ್ಹ ಫಲಾನುಭವಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ ಎಂದು ಆಳಂದ ಪುರಸಭೆಯ ಮುಖ್ಯಾಧಿಕಾರಿಗಳು ತಿಳಿಸಿದ್ದಾರೆ.

ಎಸ್.ಎಫ್.ಸಿ. (ಮು.ನಿ.) ಶೇ. 24.10 (ಎಸ್.ಸಿ.ಎಸ್.ಪಿ. ಶೇ. 17.15 ರಷ್ಟು) ಪರಿಶಿಷ್ಟ ಜಾತಿ ವರ್ಗದವರ ಕಲ್ಯಾಣ ಕಾರ್ಯಕ್ರಮಗಳ ಕ್ರಿಯಾ ಯೋಜನೆಯ ಪೌರಕಾರ್ಮಿಕರ ಕಲ್ಯಾಣ ಕಾರ್ಯಕ್ರಮಗಳಿಗೆ (ಶೇ.20) ವಿವಿಧ ಹಂತದಲ್ಲಿ (ಎಸ್.ಎಸ್.ಎಲ್.ಸಿ., ಪಿ.ಯು.ಸಿ. ಮತ್ತು ವೃತ್ತಿಪರ ಕೋರ್ಸ್‌ಗಳು) ವ್ಯಾಸಂಗ ಮಾಡುತ್ತಿರುವ ಪೌರಕಾರ್ಮಿಕರ ಮಕ್ಕಳಿಗೆ ಸಹಾಯಧನ ಒದಗಿಸಲಾಗುತ್ತದೆ.

ಎಸ್.ಎಫ್.ಸಿ. (ಮು.ನಿ) ಶೇ. 24.10 (ಟಿ.ಎಸ್.ಪಿ. ಶೇ. 6.95 ರಷ್ಟು) ಪರಿಶಿಷ್ಟ ಪಂಗಡದ ವರ್ಗದವರ ಕಲ್ಯಾಣ ಕಾರ್ಯಕ್ರಮಗಳ ಕ್ರಿಯಾ ಯೋಜನೆಯ

ಪೌರಕಾರ್ಮಿಕರ ಕಲ್ಯಾಣ ಕಾರ್ಯಕ್ರಮ (ಶೇ.20) ರಡಿ ವಿವಿಧ ಹಂತದಲ್ಲಿ ವ್ಯಾಸಂಗ ಮಾಡುತ್ತಿರುವ (ಎಸ್.ಎಸ್.ಎಲ್.ಸಿ., ಪಿ.ಯು.ಸಿ. ಮತ್ತು ವೃತ್ತಿಪರ ಕೋರ್ಸ್‌ಗಳು) ಪೌರಕಾರ್ಮಿಕರ ಮಕ್ಕಳಿಗೆ ಸಹಾಯಧನ ಒದಗಿಸಲಾಗುತ್ತದೆ.

ಎಸ್.ಎಫ್.ಸಿ (ಮು.ನಿ) ಶೇ. 7.25ರ ಇತರೆ ಹಿಂದುಳಿದ ವರ್ಗದವರ ಕಲ್ಯಾಣ ಕಾರ್ಯಕ್ರಮಗಳ ಕ್ರಿಯಾ ಯೋಜನೆಯ ವಿವಿಧ ಹಂತದಲ್ಲಿ (ಎಸ್.ಎಸ್.ಎಲ್.ಸಿ., ಪಿ.ಯು.ಸಿ. ಮತ್ತು ವೃತ್ತಿಪರ ಕೋರ್ಸ್‌ಗಳು) ವ್ಯಾಸಂಗ ಮಾಡುತ್ತಿರುವ ಇತರೆ ಬಡಜನರ ವಿದ್ಯಾರ್ಥಿಗಳಿಗೆ ಸಹಾಯಧನ ಒದಗಿಸಲಾಗುತ್ತದೆ. ಅದೇ ರೀತಿ ಎಸ್.ಎಫ್.ಸಿ (ಮು.ನಿ) ಶೇ. 5ರ ವಿಕಲಚೇತನರ ಕಲ್ಯಾಣ ಕಾರ್ಯಕ್ರಮಗಳ ಕ್ರಿಯಾ ಯೋಜನೆಯ ವಿವಿಧ ಹಂತದಲ್ಲಿ ವ್ಯಾಸಂಗ ಮಾಡುತ್ತಿರುವ ವಿಕಲಚೇತನ ವಿದ್ಯಾರ್ಥಿಗಳಿಗೆ ಹಾಗೂ ವಿಕಲಚೇತನರ ಮಕ್ಕಳಿಗೆ ಸಹಾಯಧನ ಒದಗಿಸಲಾಗುತ್ತದೆ.

ಆಸಕ್ತಿಯುಳ್ಳವರು ನಿಗದಿತ ಅರ್ಜಿ ನಮೂನೆಯನ್ನು ಆಳಂದ ಪುರಸಭೆಯ ಕಚೇರಿಯ ಟಪಾಲು/ಸಾರ್ವಜನಿಕ ಕುಂದುಕೊರತೆ ದೂರು ವಿಭಾಗದಿಂದ ಪಡೆದು ಭರ್ತಿ ಮಾಡಿ ಅಗತ್ಯ ದಾಖಲಾತಿಗಳನ್ನು ಲಗತ್ತಿಸಿ 2026ರ ಮೇ 5ರ ಮಧ್ಯಾಹ್ನ 1.30 ಗಂಟೆಯೊಳಗಾಗಿ ಸದರಿ ಕಚೇರಿಯಲ್ಲಿ ಅರ್ಜಿ ಸಲ್ಲಿಸಬೇಕು.

ನಿಗದಿತ ದಿನಾಂಕದ ನಂತರ ಬಂದ ಅರ್ಜಿಗಳನ್ನು/ಅಪೂರ್ಣ ದಾಖಲೆಗಳ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಅರ್ಜಿಯೊಂದಿಗೆ ಲಗ್ತಿಸಬೇಕಾದ ದಾಖಲೆಗಳು ಹಾಗೂ ಮತ್ತಿತರ ಹೆಚ್ಚಿನ ಮಾಹಿತಿಗಾಗಿ ಆಳಂದ ಪುರಸಭೆಯ ಕಚೇರಿಯನ್ನು ಸಂಪರ್ಕಿಸಲು ಕೋರಲಾಗಿದೆ.

## ಏ.22 ರಂದು ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ

■ ಕನ್ನಡ ಮಾತೃ ಭೂಮಿ ವಾರ್ತೆ

**ಕಲಬುರಗಿ,ಏ.21-**ಕಲಬುರಗಿ ಜೆಸ್ಕಾಂ ಕಾರ್ಯ ಮತ್ತು ಪಾಲನೆ ನಗರ ವಿಭಾಗದ ವ್ಯಾಪ್ತಿಯ ಕರುಣೇಶ್ವರ ನಗರ ಫೀಡರ್ ವ್ಯಾಪ್ತಿಯ ಪ್ರದೇಶಗಳಲ್ಲಿ ಇದೇ ಏಪ್ರಿಲ್ 22ರಂದು ಬೆಳಿಗ್ಗೆ 9 ರಿಂದ ಮಧ್ಯಾಹ್ನ 2 ಗಂಟೆಯವರೆಗೆ

ನಿರ್ವಹಣಾ ಕಾರ್ಯಕೈಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದ್ದು, ಸಾರ್ವಜನಿಕರು ಇದಕ್ಕೆ ಸಹಕರಿಸಬೇಕೆಂದು ಕಲಬುರಗಿ ಜೆಸ್ಕಾಂ ಕಾರ್ಯ ಮತ್ತು ಪಾಲನೆ ನಗರ ವಿಭಾಗದ ಕಾರ್ಯನಿರ್ವಾಹಕ ಅಭಿಯಂತರರು (ವಿ) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕರುಣೇಶ್ವರ ನಗರ ಫೀಡರ್: ಸದಾಶಿವನಗರ, ನವಜೀವನ ಸೊಸೈಟಿ, ಕಲ್ಮಣಕರ್ ಲೇಔಟ್, ರಾಮಮಂದಿರ, ಕರುಣೇಶ್ವರ ನಗರ, ದೇವಾನಗರ, ಪಿಟಿ ಕಾಲೋನಿ, ಎಸ್‌ಬಿಐ ಕಾಲೋನಿ, ಗಣೇಶ ನರ್ಸಿಂಗ್ ಹೋಮ್ ಏರಿಯಾ, ಯರಗೋಳ ಕಲ್ಯಾಣ ಮಂಟಪ್, ಕರುಣೇಶ್ವರ ನಗರ ರಾಜ್ ಮಹಲ್ ಲೇಔಟ್, ಶ್ರೀಹರಿ ನಗರ, ಮಾನ್‌ಕರ ಲೇಔಟ್, ಸಾಯಿ ಮಂದಿರ ಏರಿಯಾ ಆನಂದೇಶ್ವರ ಕಾಲೋನಿ ಡಾಮಿನಂಟ ಸ್ಕೂಲ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳು.

## ಕೆ-ಸೆಟ್ ಹಾಗೂ ಯುಜಿಸಿ-ನೆಟ್ ಪರೀಕ್ಷೆಗಳಿಗೆ ತರಬೇತಿ: ಹೆಸರು ನೋಂದಣಿಗೆ ಸೂಚನೆ

■ ಕನ್ನಡ ಮಾತೃ ಭೂಮಿ ವಾರ್ತೆ

**ಕಲಬುರಗಿ,ಏ.21-**ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ವತಿಯಿಂದ, ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಮೂಲಕ ನಡೆಸಲಿರುವ ರಾಜ್ಯಮಟ್ಟದ ಸಹಾಯಕ ಪ್ರಾಧ್ಯಾಪಕರ ಅರ್ಹತಾ ಪರೀಕ್ಷೆಗೆ (ಕೆ-ಸೆಟ್) ಹಾಗೂ ನವದೆಹಲಿಯ ವಿಶ್ವವಿದ್ಯಾನಿಲಯದ ಧನಸಹಾಯ ಆಯೋಗದವರು ನಡೆಸಲಿರುವ ರಾಷ್ಟ್ರಮಟ್ಟದ ಕಾಲೇಜು ಸಹಾಯಕ ಪ್ರಾಧ್ಯಾಪಕರ (ಯುಜಿಸಿ-ನೆಟ್) ಮತ್ತು ಕಿರಿಯ ಶಿಷ್ಯವೇತನ ಸಂಶೋಧನ ಸಹಾಯಕರ (ಜೆಆರ್‌ಎಫ್) ಅರ್ಹತಾ ಪರೀಕ್ಷೆಗಳಿಗೆ 45 ದಿನಗಳ ತರಬೇತಿಯನ್ನು ಮೈಸೂರಿನ ಕೇಂದ್ರ ಕಛೇರಿಯಲ್ಲಿ ನೀಡಲು ನಿರ್ಧರಿಸಲಾಗಿದೆ.

ಆಸಕ್ತರು 2026ರ ಏಪ್ರಿಲ್ 24 ರೊಳಗಾಗಿ ಬೆಳಿಗ್ಗೆ 10 ಗಂಟೆಯಿಂದ ಸಂಜೆ 4.30 ಗಂಟೆಯವರೆಗೆ ತಮ್ಮ ಹೆಸರನ್ನು ನೊಂದಾಯಿಸಿಕೊಳ್ಳಬೇಕು. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 0821-2515944 ಗೆ ಸಂಪರ್ಕಿಸಬೇಕೆಂದು ಕುಲಸಚಿವ ಪ್ರೊ. ನವೀನ ಕುಮಾರ್ ಎಸ್.ಕೆ ಅವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಕಲಬುರಗಿ ಸರ್ಕಾರಿ ಕಿವುಡ ಮಕ್ಕಳ ಶಾಲೆಯಲ್ಲಿ ಪ್ರವೇಶಾತಿ ಪ್ರಾರಂಭ

**ಕಲಬುರಗಿ,ಏ.21-**ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಅಡಿಯಲ್ಲಿ ಕಲಬುರಗಿಯ ಸರ್ಕಾರಿ ಕಿವುಡ ಮಕ್ಕಳ ಶಾಲೆಯಲ್ಲಿ 1 ರಿಂದ 8ನೇ ತರಗತಿಗಳಿಗೆ ಪ್ರವೇಶಾತಿ ಪ್ರಾರಂಭವಾಗಿದೆ ಎಂದು ಕಲಬುರಗಿಯ ಸರ್ಕಾರಿ ಕಿವುಡ ಮಕ್ಕಳ ಶಾಲೆಯ ಅಧೀಕ್ಷಕರು ತಿಳಿಸಿದ್ದಾರೆ.

ಈ ಶಾಲೆಯಲ್ಲಿ 6 ರಿಂದ 14 ವರ್ಷದೊಳಗಿನ ಶ್ರವಣದೋಷವುಳ್ಳ ಬಾಲಕರು ಪ್ರವೇಶಾತಿ ಪಡೆಯಬಹುದಾಗಿದೆ. ಪ್ರವೇಶ ಪಡೆದ ಬಾಲಕರಿಗೆ ಶಿಕ್ಷಣ, ಕಂಪ್ಯೂಟರ್, ಇತ್ಯಾದಿ ತರಬೇತಿ ಜೊತೆಗೆ ಮಕ್ಕಳಿಗೆ ಉಚಿತ ವಸತಿ, ಊಟ ಮತ್ತು ಸಮವಸ್ತ್ರ ಒದಗಿಸಲಾಗುತ್ತದೆ. ಮತ್ತಿತರ ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆ ಸಂತೋಷ-9741953333, ಮಹಾಂತೇಶ-743234892 ಹಾಗೂ ವೈಶಾಲಿ-9611364257 ಗಳಿಗೆ ಸಂಪರ್ಕಿಸಲು ಕೋರಲಾಗಿದೆ.

## ಬಂಗಾಳಿ ವಲಸೆ ಸಮುದಾಯದ ಹಲವು ಸಮಸ್ಯೆಗಳ ಪರಿಹಾರಕ್ಕೆ ಆಗ್ರಹಿಸಿ ಪ್ರತಿಭಟನೆ

ಆದರೆ ಆ ಕುಟುಂಬಗಳ ಮೂರನೇ ತಲೆಮಾರಿನವರೂ ಇಂದಿಗೂ ಮೂಲಭೂತ ಹಕ್ಕುಗಳಿಂದ ವಂಚಿತರಾಗಿದ್ದಾರೆ ಎಂದು ದೂರಿದರು.

ಭೂ ಸಂಬಂಧಿತ ಸಮಸ್ಯೆಗಳು ಗಂಭೀರವಾಗಿದ್ದು, ಹಲವು ಕುಟುಂಬಗಳಿಗೆ ಇನ್ನೂ ಮಾಲೀಕತ್ವದ ದಾಖಲೆಗಳು ಲಭ್ಯವಾಗಿಲ್ಲ. ಭೂಮಿ ಹಸ್ತಾಂತರ ಪ್ರಕ್ರಿಯೆ ಪೂರ್ಣಗೊಂಡಿಲ್ಲದೆ, ಬಹುತೇಕ ಜನರು ಕೇವಲ ಕಬಳಿಕೆಯ ಹಕ್ಕು ಹೊಂದಿದ್ದಾರೆ. ಭೂಮಿ ಡಿಜಿಟಲೀಕರಣದ ವೇಳೆ ಅನೇಕರ ಹೆಸರುಗಳು ದಾಖಲೆಗಳಿಂದ ಅಳಿದು ಹೋಗಿದ್ದು, ಕೆಲವು ಜಾಗಗಳನ್ನು ಸರ್ಕಾರದ ಅಥವಾ ಬೇನಾಮಿ ಎಂದು ದಾಖಲಿಸಲಾಗಿದೆ ಎಂದು ಆರೋಪಿಸಿದರು.

ಇದರಿಂದಾಗಿ ರೈತರಿಗೆ ಕೃಷಿ ಸಾಲಗಳು ಅಥವಾ ಕಿಸಾನ್ ಕ್ರೆಡಿಟ್ ಕಾರ್ಡ್ ಸೌಲಭ್ಯಗಳು ಸಿಗದೇ, ಖಾಸಗಿ ಸಾಲಗಾರರ ಮೇಲೆ ಅವಲಂಬಿತರಾಗಬೇಕಾದ ಪರಿಸ್ಥಿತಿ ಉಂಟಾಗಿದೆ ಎಂದು ತಿಳಿಸಿದರು.

ಜಾತಿ ಮತ್ತು ಸಾಮಾಜಿಕ ಗುರುತಿನ ವಿಚಾರದಲ್ಲಿ, ನಾಮಶೂದ್ರ, ಪೊಂದ್ರ, ಮಾಝಿ ಮೊದಲಾದ ಸಮುದಾಯಗಳು ಪಶ್ಚಿಮ ಬಂಗಾಳದಲ್ಲಿ ಪರಿಶಿಷ್ಟ ಜಾತಿಗೆ ಸೇರಿದವರಾಗಿದ್ದರೂ, ಕರ್ನಾಟಕದಲ್ಲಿ ಅವರಿಗೆ ಮೀಸಲಾತಿ ಸೌಲಭ್ಯಗಳು ದೊರೆಯುತ್ತಿಲ್ಲ. ಇದರ ಪರಿಣಾಮವಾಗಿ ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಮತ್ತು ಸರ್ಕಾರಿ ಉದ್ಯೋಗಗಳಿಂದ ವಂಚಿತರಾಗುತ್ತಿದ್ದಾರೆ.

ಸರ್ಕಾರ್ ಎಂಬ ಕುಟುಂಬ ಹೆಸರನ್ನು ಬಳಸುತ್ತಿರುವುದರಿಂದ ಆಡಳಿತಾತ್ಮಕ ಗೊಂದಲ ಉಂಟಾಗಿ, ಜಾತಿ ಪ್ರಮಾಣ ಪತ್ರ ಸೇರಿದಂತೆ ಹಲವು ದಾಖಲೆಗಳನ್ನು ಪಡೆಯಲು ತೊಂದರೆ ಆಗುತ್ತಿದೆ. ಇದನ್ನು ಕುಟುಂಬ ಹೆಸರಾಗಿ ಪರಿಗಣಿಸುವಂತೆ ಸರ್ಕಾರ ಸ್ಪಷ್ಟ ನಿರ್ದೇಶನ ನೀಡಬೇಕು ಎಂದು ಒತ್ತಾಯಿಸಿದರು.

ಬೆಂಗಾಳಿ ಭಾಷೆಯ ಪ್ರಾಥಮಿಕ ಶಿಕ್ಷಣವನ್ನು ಹಳೆಯದಾಗಿ ನೀಡಲಾಗುತ್ತಿತ್ತಾದರೂ, ಇತ್ತೀಚಿನ ವರ್ಷಗಳಲ್ಲಿ ಅದನ್ನು ಸ್ಥಗಿತಗೊಳಿಸಲಾಗಿದೆ. ಬೆಂಗಾಳಿ ಭಾಷಾ ಶಿಕ್ಷಕರನ್ನು ಮರುನಿಯೋಜಿಸುವಂತೆ ಆಗ್ರಹಿಸಿದರು.

ಹಾಗೆಯೇ ಮತದಾರರ ಗುರುತಿನ ಚೀಟಿ ಮತ್ತು ರೇಷನ್ ಕಾರ್ಡ್ ನೀಡುವಲ್ಲಿ ಅನಗತ್ಯ ದಾಖಲೆಗಳನ್ನು ಕೇಳಲಾಗುತ್ತಿದ್ದು, ಹಲವಾರು ಕುಟುಂಬಗಳು ಬಿಪಿಎಲ್ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ನಾವು ವಲಸಿಗರಲ್ಲ, ಸರ್ಕಾರದಿಂದ ಪುನರ್ವಸತಿ ಪಡೆದ ನಾಗರಿಕರು ಎಂಬುದನ್ನು ಆಡಳಿತ ಅರಿಯಬೇಕು ಎಂದು ಹೇಳಿದರು.

ಇನ್ನೂ 90 ದಿನಗಳಲ್ಲಿ ಕ್ರಮ ಕೈಗೊಳ್ಳದಿದ್ದರೆ, ಸಿಂಧನೂರಿನಿಂದ ರಾಯಚೂರುವರೆಗೆ ನ್ಯಾಯ ಪಾದಯಾತ್ರೆ ನಡೆಸಲಾಗುವುದು, ಜಿಲ್ಲಾಧಿಕಾರಿ ಕಚೇರಿ ಎದುರು ಅನಿರ್ದಿಷ್ಟಾವಧಿ ಧರಣಿ ಹಮ್ಮಿಕೊಳ್ಳಲಾಗುವುದು ಹಾಗೂ ಈ ಹೋರಾಟವನ್ನು ರಾಜ್ಯ ಮತ್ತು ರಾಷ್ಟ್ರೀಯ ಮಟ್ಟಕ್ಕೆ ವಿಸ್ತರಿಸಲಾಗುವುದು ಎಂದು ಎಚ್ಚರಿಸಿದರು.

ಈ ಸಂದರ್ಭದಲ್ಲಿ ಅಜಾದ್‌ಬಂಗ್ ಆರ್ಮಿ ಸಂಘಟನೆಯ ಪ್ರಮುಖರಾದ ಸುಬ್ರತ್ ಕುಮಾರ್ ವಿಶ್ವಾಸ್, ನಿತಾಯ್ ತರಫದಾರ್, ಸಾಧನ್ ಸನ್ ಸಾನಾ, ಸುನಿಲ್ ಮಿಸ್ತ್ರಿ, ಶ್ರೀದುಲ್ ದತ್ತಾ, ಸರೋಜಿತ್ ಗೈನ್, ಅರ್ಜುನ್ ಗೋಲ್ದರ್, ಸಾಧನ್ ಮಂಡಲ್, ಸಮರೇಶ್ ಮಂಡಲ್, ಬಿಶು ರಾಯ್, ದಿನೇಶ್ ರಾಯ್, ಸುಖ ಮಂಡಲ್, ಸಾಗರ್ ಮಂಡಲ್, ಕನಕ್ ಮಂಡಲ್, ಕುಮಾರೇಶ್ ಮಂಡಲ್, ಪ್ರಮೋದ್ ಮಿಸ್ತ್ರಿ, ಧರ್ಮೇಂದ್ರ ಬಿಸ್ವಾಸ್, ಪಿಯೂಷ್ ಮಿರ್ಧಾ, ಪ್ರದೀಪ್ ದಾಸ್, ದಿಲೀಪ್ ಸರ್ಕಾರ್, ರಂಜಿತ್ ದತ್ತಾ ಮತ್ತು ಸುಧಾನಾ ಸಿಕಂದರ್. ಮತ್ತು ಬೆಂಗಾಳಿ ಸಮುದಾಯದ ಮುಖಂಡರು ಭಾಗವಹಿಸಿದ್ದರು.

## ಸಮಾಜದ ಜನರು ಭಾಗವಹಿಸಲು ಚಂದ್ರಶೇಖರ ಮನವಿ

ವೇದಿಕೆ ಕಾರ್ಯಕ್ರಮ ನಡೆಯಲಿದೆ ಎಂದರು.

ಕಾರ್ಯಕ್ರಮದಲ್ಲಿ ಸಚಿವರು, ಜಿಲ್ಲೆಯ ಸಂಸದರು, ಶಾಸಕರು ಸೇರಿ ಹಲವು ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಭಾಗಿಯಾಗಲಿದ್ದಾರೆ. ವೇದಿಕೆ ಕಾರ್ಯಕ್ರಮದ ಕೊನೆಯಲ್ಲಿ 2025-26ನೇ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ.80ಕ್ಕಿಂತ ಹೆಚ್ಚು ಅಂಕ ಗಳಿಸಿದ ಸಮಾಜದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನಿಡಲಾಗುವುದು ಎಂದು ತಿಳಿಸಿದರು.

ಭಗೀರಥ ಜಯಂತಿ ಕಾರ್ಯಕ್ರಮಕ್ಕೆ ಸಮಾಜದ ಜನರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು. ಈ ಸಂದರ್ಭದಲ್ಲಿ ಸಂಘದ ಪ್ರಮುಖರಾದ ಪಾಗುಂ ಟಪ್ಪ, ದೇವೇಂದ್ರ, ವೆಂಕೋಬಾ, ಅಮರೇಶಪ್ಪ, ಯು.ವೆಂಕೋಬಾ, ಸುಭಾಷ್, ನಾಗರಾಜ, ಶ್ರೀನಿವಾಸ ಸೇರಿ ಅನೇಕರಿದ್ದರು.

## ಮಹಿಳಾ ಮೀಸಲಾತಿ ಮಸೂದೆ ವಿರೋಧಿಸಿದ ಕಾಂಗ್ರೆಸ್ ವಿರುದ್ಧ ಜೆಡಿಎಸ್ ಆಕ್ರೋಶ

ವಿರೋಧಿ ಸಂಸ್ಕೃತಿ ಪ್ರದರ್ಶಿಸಿದ್ದು, ಪ್ರಜಾಪ್ರಭುತ್ವ ಹಾಗೂ ಮಹಿಳೆಯರಿಗೆ ಅಪಮಾನ ಮಾಡಿದೆ. ಇದರಿಂದ ಕಾಂಗ್ರೆಸ್ ಪಕ್ಷದಲ್ಲಿ ಇಚ್ಛಾಶಕ್ತಿ ಕೊರತೆ ಇರುವುದು ಸ್ಪಷ್ಟವಾಗಿದೆ. ಮಹಿಳೆಯರು ಜಾಗೃತರಾಗುವ ಮೂಲಕ ಮುಂದಿನ ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷ ದೂಳಿಪಟ ಮಾಡಬೇಕು ಎಂದು ಕರೆ ನೀಡಿದರು.

ಜೆಡಿಎಸ್ ಪಕ್ಷ ಮತ್ತು ದೇವೇಗೌಡರು ಈ ಹಿಂದೆ ಮಹಿಳಾ ಮೀಸಲಾತಿ ಮಸೋದೆ ಜಾರಿಗೆಗೆ ಪ್ರಯತ್ನಿಸಿದ್ದರು. ಇದೀಗ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಎನ್ ಡಿಎ ಸರ್ಕಾರ ನಾರಿಶಕ್ತಿಗೆ ಬಲ ತುಂಬಲು ಮಸೂದೆ ಜಾರಿಗೆಗೆ ಹೊರಟಿತ್ತು. ಆದರೆ ಕಾಂಗ್ರೆಸ್ ಪಕ್ಷ ಇದನ್ನು ವಿರೋಧಿಸುವ ಮೂಲಕ ಹುಟ್ಟುವ ಕೂಸನ್ನು ಕೊಲ್ಲುವ ಕೆಲಸ ಮಾಡಿದೆ ಎಂದರು ಕಾಂಗ್ರೆಸ್ ವಿರುದ್ಧ ನಾಡಗೌಡ ಆಕ್ರೋಶ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಜೆಡಿಎಸ್ ಪಕ್ಷದ ನಗರ ಘಟಕದ ಅಧ್ಯಕ್ಷ ರವಿಗೌಡ, ಮುಖಂಡರಾದ ವೆಂಕಟೇಶ ನಂಜಲದಿನ್ನಿ, ಜಿ.ಸತ್ಯನಾರಾಯಣ, ಎಸ್.ಬಿ.ರೆಡ್ಡಿ, ಅಭಿಷೇಕ ನಾಡಗೌಡ, ಅಶೋಕಗೌಡ ಗದ್ರಟಗಿ, ಎಸ್.ಪಿ.ಟೇಲರ್, ಕೆ.ಜಿಲಾನಿಪಾಷಾ, ವೀರಭದ್ರಪ್ಪ ಕುರಕುಂದಿ, ನಿರುಪಾದಿ, ಜಗದೀಶ ವಕೀಲ, ವೆಂಕಟೇಶ ಗಿರಿಜಾಲಿ, ಪ್ರಕಾಶಬಾಬು, ಪದ್ದಮ್ಮ, ಸುಜಾತ, ತಾಜ್ ಅಂಜುಮ್, ನಾಗಜ್ಯೋತಿ, ಚಂದ್ರಕಲಾ, ವಿಜಯಲಕ್ಷ್ಮಿ ಸೇರಿದಂತೆ ನೂರಾರು ಜನ ಜೆಡಿಎಸ್ ಮುಖಂಡರು ಇದ್ದರು.

OWNER, PUBLISHER, PRINTER BY: SHYAM SUNDER L. PUBLISHED FROM: H: NO: 5-3-6, HANUMAN TALKIES ROAD, OPP VAIKUNTAM TEMPLE, NETAJI NAGAR, RAICHUR-584101, DIST: RAICHUR, KARNATAKA AND PRINTED AT: KANNADA MATHRUBHOOMI PRINTERS, SHOP NO: 5-3-6, HANUMAN TALKIES ROAD, OPP VAIKUNTAM TEMPLE, NETAJI NAGAR, RAICHUR-584101, DIST: RAICHUR, KARNATAKA, EDITOR BY: SHYAM SUNDER L